ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಏಪ್ರಿಲ್ 13, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 332 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023

janathavani@mac.com
www.janathavani.com
08192 254736 91642 99999



SRI VYSHNAVI CHETANA'S

# VIDYACHETANA PU COLLEGE

Dr. Vijayalakshmi V
Chairperson

CHETANA

18th Cross, Anjaneya Badavane, Davangere-577004. Mob: 7019009046 / 9900559102

## Sensational Second PU-2024 Result

100 % Result

Congratulations to all our achievers

STATE 7th RANK

592 / 600

SRUSTI B KOLAL
Reg.No: 20249419171

| Subject | Marks |
|---|---|
| Kannada | 100 |
| English | 98 |
| Physics | 96 |
| Chemistry | 99 |
| Mathematics | 99 |
| Biology | 100 |

Distinctions 492 (83 %) | First Class 155 (17 %)

| Marks | Name | Reg.No |
|---|---|---|
| 589 | NAVEEN H S | 20249402291 |
| 588 | KAVANA P G | 20249418735 |
| 586 | ROHAN K S | 20249419040 |
| 586 | AKSHATA S | 20249418457 |
| 586 | DHANUSH M S | 20249402107 |
| 584 | SURYA S | 20249419189 |

| Marks | Name |
|---|---|
| 584 | RAHUL S N |
| 584 | KULMI AMRUTHA |
| 584 | PRERANA V |
| 583 | SHARATH KUMAR P M |
| 583 | SAHANA R P |
| 583 | TANMAYI V KOTTUR |
| 582 | KIRAN KUMAR V M |
| 582 | PRIYANKA G S |
| 582 | PRUTHVI HOMBALE |
| 582 | CHIRANTHAN K R |
| 582 | [illegible] |
| 581 | SHIVAKUMAR K C |
| 581 | KIRAN S |
| 580 | SHASHANK R |
| 580 | YASHASWINI MULLALLI |
| 580 | SANJANA R |
| 580 | D TEJASHWINI |
| 580 | C S SRUJAN |
| 580 | NISAR K S |
| 579 | VIJAYALAXMI D |
| 578 | SHREYA C J |
| 577 | CHETHAN KUMAR M U |
| 577 | SRUSHTI G K |
| 577 | SAMRAT J AJARADDI |
| 577 | MONIKA P DEVIGERE |
| 577 | RAHUL NAIK L |
| 576 | HARSHA S B |
| 576 | T CHANDU |
| 576 | KIRAN A |
| 576 | KEERTHANA S L |
| 576 | IQRA NAZNEEN |
| 576 | SHIVAKUMARA G P |
| 575 | VAISHNAVI M |
| 575 | ABHISHEK N L |
| 575 | U R ANIRUDHA |
| 575 | K LIKHITH KUMAR |
| 575 | MONIKA S |
| 575 | N CHANDANA |
| 574 | SURENDRA V |
| 574 | ANJALI A S |
| 574 | ANUSHA D |
| 574 | CHINMAY H S |
| 574 | ROHITH GOWDA N |
| 574 | SHREE HARI B V |
| 574 | BRUNDHA G S |
| 574 | PUNITH KUMAR H M |
| 573 | MANYA P |
| 573 | DEEPIKA B M |
| 573 | RAJA RAJESHWARI G S |
| 573 | MANOHARI G S |
| 573 | RANGANATHA B S |
| 573 | AMRUTH S A |
| 573 | SUCHITH H B |
| 572 | MANOJ KUMAR M G |
| 572 | VARSHINI G |
| 572 | PRUTHVISHALINI C S |
| 572 | DEEPIKA D A |
| 572 | ANJALI |
| 572 | AAQIB AHMED KHAZI |
| 572 | KARTHIK R |
| 572 | SRUJAN S |
| 572 | YASHVANTH T G |
| 571 | MAMATHA S |
| 571 | ABHISHEK C |
| 571 | BHARATH G M |
| 571 | MAMATHA M |
| 571 | DISHA K V |
| 571 | S M SHRIVATHSA N |
| 570 | DHANUJA S |
| 570 | PALLAVI T N |
| 570 | JYOTHIKA G S |
| 570 | DEEPTI RAJSHEKAR B |
| 570 | RAKESH P R |
| 570 | AMRUTHA G E |
| 570 | KAVYA KODLI |
| 570 | A G MOHAN |
| 570 | PRAJWAL J N |
| 569 | SHILPA KORADAL |
| 569 | MOHAN G K |
| 568 | ROHAN GOWDA N |
| 568 | BHARGAVI S H |
| 568 | MANYA G M |
| 568 | KEERTHANA M |
| 568 | SHARATH G M |
| 568 | KAVANA H V |
| 568 | C D HAMSASHREE |
| 568 | SHRAVYA Y N |
| 568 | ABHISHEK K |
| 567 | GOWTHAM M |
| 567 | SANGEETA B K |
| 567 | VARUN D |
| 567 | ANANYA S |
| 567 | POOJA M KADAPPANAVAR |
| 567 | BHANUPRIYA S |
| 567 | SUPRITA |
| 567 | SHASHANK M |
| 567 | K M PAVAN KUMAR |
| 567 | VIKAS BANAKAR |
| 566 | BHAGYASHREE I H |
| 566 | ANU H K |
| 566 | CHARAN KUMAR N R |
| 566 | KARTIK SHANTAPPA D |
| 566 | NUTHAN O |
| 566 | PRIYANKA D M |
| 566 | HARSHINI P J |
| 565 | VARSHA S |
| 565 | UDAY KUMAR M |
| 565 | YASHASWINI B M |
| 565 | NAGARAJA H |
| 565 | HARSHITHA H S |
| 565 | HALASWAMY S |
| 565 | RAMYA H M |
| 564 | RUCHITHA K |
| 564 | RAVISHANKAR M |
| 564 | SHRYAVANI N T |
| 564 | PRIYA KASHETTI |
| 564 | RAKSHA S M |
| 563 | LAKSHMI D L |
| 563 | KARTHIK G E |
| 563 | VISHWANATHA L U |
| 563 | RUCHITHA B |
| 563 | CHINMAY R |
| 563 | ANUP Y R |
| 563 | SANJANA G |
| 562 | BHOOMIKA R SHETTY |
| 562 | GOWTHAM K M |
| 562 | SUCHITH H L |
| 562 | RUCHITHA H C |
| 562 | POORNIMA H J |
| 562 | SAMBHRAM M |
| 562 | JAYANTH T |
| 562 | GIRISH M R |
| 562 | NIKHIL GOWDA N |
| 561 | RAGHAVENDRA B N |
| 561 | SRINIDHI J |
| 561 | NIRANJAN JAGADEESH B |
| 560 | SUDEEP KUMAR S G |
| 560 | SUMANTH C |
| 560 | VINAYAK GUDAGUNTI |
| 560 | DHANVITH D |
| 560 | R HARSHAVARDHANA |
| 560 | MONIKA K |
| 560 | NAGARAJ B M |
| 560 | PRERANRAJ C |
| 560 | BHUMIKA J |
| 560 | SHREYAS H S |
| 560 | SHIVAPRASAD K |
| 560 | VIVEK M |
| 560 | AISHWARYA SHARMA |
| 560 | CHANDANA K M |
| 559 | ROHAN G M |
| 559 | BHOOMIKA RAGHAVENDRA Y |
| 559 | SAVARKAR R G |
| 559 | POORVI NILOL K S |
| 559 | ARUN KUMAR M |
| 559 | SANJAY S T |
| 558 | IMAMBEE |
| 558 | RANJITHA M S |
| 558 | MADHAVI |
| 558 | MOHAN T L |
| 558 | BINDU K M |
| 558 | RIFA AJMAYEEN B A |
| 557 | PRIYANKA G P |
| 557 | S VEERENDRA PATIL |
| 557 | HARSHITHA G |


continued to 3rd page

# ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶಿವಯೋಗಿ

**ಶ್ರೀ ಗುರು ಬಕ್ಕೇಶ್ವರ ಮಹಾಶಿವಯೋಗಿಗಳ ರಥೋತ್ಸವದ ಪ್ರಯುಕ್ತ ಈ ಲೇಖನ**



*ಶರಣರ ನೆನೆದರೆ ಸರಗೀಯ ಇಟ್ಟಾಂಗ,*
*ಅರಳು ಮಲ್ಲಿಗಿ ಮುಡಿದಂಗೆ,*
*ಅರಳು ಮಲ್ಲಿಗಿ ಮುಡಿದಂಗೆ,*
*ಕಲ್ಯಾಣದ ಶರಣರ ನೆನೆಯೋ*
*ನನಮನವೇ !*

ಹನ್ನೆರಡನೇಯ ಶತಮಾನದಲ್ಲಿ ವಿಶ್ವಗುರು, ಧರ್ಮಗುರು, ವಿಭೂತಿ ಪುರುಷ, ಶ್ರೀ ಜಗಜ್ಯೋತಿ ಬಸವೇಶ್ವರರು ಕ್ರಾಂತಿಯ ಕಹಳೆಯನ್ನೂದಿ, ಸಮ ಸಮಾಜವನ್ನು ಕಟ್ಟುವಲ್ಲಿ ಅಹರ್ನಿಷಿ ದುಡಿದಂತಹ ಸಂದರ್ಭದಲ್ಲಿ ಅನೇಕ ಶರಣ-ಶರಣೆಯರು ಕಲ್ಯಾಣ ಪಟ್ಟಣಕ್ಕೆ ಆಗಮಿಸಿ ಬಸವಣ್ಣನವರ ಮೂಲ ಮಂತ್ರವಾದ ಕಾಯಕ ಮತ್ತು ದಾಸೋಹದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಅನುಭವ ಮಂಟಪದಲ್ಲಿ ತಮ್ಮ ತಮ್ಮ ಅನುಭವವಗಳನ್ನು ಹಂಚಿಕೊಳ್ಳುವಂತಹ ಸಂದರ್ಭದಲ್ಲಿ ಅವರಾಡಿದ ಮಾತುಗಳೇ ವಚನಗಳಾಗಿ ಮಾರ್ಪಟ್ಟು ಸರ್ವರಿಗೂ ಮಾರ್ಗದರ್ಶನ ಮಾಡುವಂತಹ ಮೈಲಿಗಲ್ಲುಗಳಾದವು. ಕಾಯಕ ಮಾಡುವುದು ಸರ್ವರಿಗೂ ಕಡ್ಡಾಯವಾಗಿತ್ತು. ಶರಣರು ಎಂದರೆ ಕಾಯಕ, ಕಾಯಕ ಎಂದರೆ ಶರಣರು ಎನ್ನುವಷ್ಟರ ಮಟ್ಟಿಗೆ ಕಾಯಕ ಪ್ರಾಧ್ಯಾನ್ಯತೆಯನ್ನು ಪಡೆದಿತ್ತು. ಶರಣರನ್ನು ಅವರು ಮಾಡುತ್ತಿದ್ದಂತಹ ಕಾಯಕದಿಂದಲೇ ಗಪರುತಿಸಲಾಗುತ್ತಿತ್ತು. ಉದಾಹರಣಗೆ ಹಡಪದ ಅಪ್ಪಣ್ಣ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ,ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾದಯ್ಯ, ಮೇದಾರ ಕೇತಯ್ಯ ಸಮಗಾರ ಹರಳಯ್ಯ, ಕುರುಬ ಗೊಲ್ಲಾಳೇಶ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಲಕ್ಕಮ್ಮ, ಹಡಪದ ಲಿಂಗಮ್ಮ ಇತ್ಯಾದಿ ಇತ್ಯಾದಿ.

ಈ ಪರಂಪರೆಯಲ್ಲಿ ಉಳವಿಯಲ್ಲಿ ನೆಲೆಸಿದ್ದ ರೇಚಿ ತಂದೆಗಳು ಒಬ್ಬರು, ಅವರು ಉಳವಿಯ ಮಹಾಮನೆಯಲ್ಲಿ ಚನ್ನಬಸವೇಶ್ವರ ಶಿಷ್ಯರಾಗಿ ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತರು ಪ್ರಸಾದದ ಮಾಡಿದ ನಂತರ ಅವರಿಗೆ ತಾಂಬೂಲ ಕೊಡುವ ಕಾಯಕವನ್ನು ಮಾಡುತ್ತಲಿದ್ದರು.

ಇಂತಹ ಮಹಾಮಹಿಮಾ ಶಾಲಿಗಳ ಆಶೀರ್ವಾದದಿಂದ ಈ ಭೂಮಿಗೆ ಅವತರಿಸಿ ಬಂದವರು ಶ್ರೀಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿಗಳವರು. ದಾವಣಗೆರೆ ತಾಲ್ಲೂಕಿನ ಗುಮ್ಮನೂರು ಗ್ರಾಮದಲ್ಲಿ ಹಿರೇಮಠದ ಬಸವಲಿಂಗಯ್ಯನವರು ಗ್ರಾಮದ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ಮಾಡುತ್ತಾ, ಊರಿನ ಎಲ್ಲಾ ಕಾರ್ಯಗಳನ್ನು ಮಾಡುತ್ತಲಿರುತ್ತಾರೆ. ಇವರ ಧರ್ಮಪತ್ನಿ ಪಾರ್ವತಮ್ಮನವರು ಸುಂದರವಾದಂತಹ ಸಂಸಾರ ಸತಿಪತಿಗಳೊಂದಾದ ಭಕ್ತಿ ಹಿತವಾಗಿರ್ಪುದು ಶಿವಂಗೆ, ಸತಿಪತಿಗಳೊಂದಾಗದ ಭಕ್ತಿ ಅಮೃತದೊಳಗೆ ವಿಷವ ಬೆರಸಿದಂತೆ ಕಾಣಾ ರಾಮನಾಥ ಎನ್ನುವ ಜೇಡರ ದಾಸಿಮಯ್ಯನವರ ವಚನದಂತೆ, ಸತಿಪತಿಗಳೊಂದಾಗಿ ಸಂಸಾರ ರಥವನ್ನು ಸಾಗಿಸುತ್ತಾ ಜೀವನವನ್ನು ನಡೆಸುತ್ತಿರುತ್ತಾರೆ. ಆದರೆ, ಅವರ ಸಂಸಾರದಲ್ಲಿ ಒಂದು ಕೊರಗು ಕಾಡುತ್ತಿರುತ್ತದೆ. ಅದೇನೆಂದರೆ, ಮಕ್ಕಳ ಭಾಗ್ಯವಿಲ್ಲದೇ ಇರುವ ಚಿಂತೆ. ಎಲ್ಲಾ ಇದ್ದು, ಮಕ್ಕಳಿಲ್ಲದಿದ್ದರೆ ಮಾಡುವುದೇನಪ್ಪಾ ಎಂದು ಚಿಂತಾಕ್ರಾಂತಳಾದ ಪಾರ್ವತಮ್ಮನವರು ತಮ್ಮ ಮನದ ಇಂಗಿತವನ್ನು ಬಸವಲಿಂಗಯ್ಯನವರಲ್ಲಿ ನಿವೇದಿಸಿಕೊಳ್ಳುತ್ತಾರೆ. ನಮಗೆ ನಮ್ಮ ವಂಶವನ್ನು ಬೆಳಸುವ ವಂಶೋದ್ಧಾರಕ ಬೇಕು, ನಾನು ಬಂಜೆ ಅಂತ ಅನ್ನಿಸಿಕೊಳ್ಳಲು ಸಿದ್ಧಳಿಲ್ಲ. 'ಬಾಲಕರಿಲ್ಲದ ಬಾಲಿದಾತರ ಜನ್ಮ ಬಾಡಿಗೆ ಎತ್ತು ದುಡಿದಂಗೆ ಬಾಳೆಲೆಯ ಹಾಸುಂಡು ಬೀಸಿ ಒಗೆದಂಗ' 'ಕಂದನ ಕೊಡು ಶಿವನ ಬಂಧನ ಬಿಡಲಾರೆ, ಹಂಗೀನ ಕೂಳು ತಿನ್ನಲಾರೆ, ಬಂಜೆ ಎಂಬ ಶಬ್ಧ ಹೊರಲಾರೆ ಎಂದಾಗ, ಬಸವಲಿಂಗಯ್ಯ ನವರು ಇದಕ್ಕೆ ಏಕೆ ಇಷ್ಟೊಂದು ಚಿಂತೆ, ಗುರು ಅನುಗ್ರಹಿಸಿದ ಇಷ್ಟಲಿಂಗ ನಮ್ಮಿಬ್ಬರ ಕೊರಳಲ್ಲಿದೆ. ಅದು ಇಷ್ಟಾರ್ಥಗಳನ್ನು ಈಡೇರಿಸುವುಂತಹ ಲಿಂಗ ಇಂತಹ ಲಿಂಗ ಕರುಣಿಸಿದ ಹೆಬ್ಬಾಳದ ಶ್ರೀ ರುದ್ರೇಶ್ವರ ಸ್ವಾಮಿಗಳ ದರ್ಶನ ಮಾಡಿ, ತಮ್ಮ ಮನದ ಇಂಗಿತವನ್ನು ಅವರಲ್ಲಿ ನಿವೇದಿಸಿಕೊಳ್ಳೋಣ, ಅವರು ಸೂಕ್ತ ಮಾರ್ಗದರ್ಶನ ಮಾಡುತ್ತಾರೆ ಎಂದು ಸಮಾಧಾನ ಮಾಡಿ ಅವರ ದರ್ಶನ ಪಡೆಯುತ್ತಾರೆ.

ಅವರು ನಿಮ್ಮ ಇಷ್ಟಾರ್ಥವು ಸಿದ್ಧಿಯಾಗುವ ಕಾಲ ಬಂದಿದೆ. ಬಸವಲಿಂಗಯ್ಯನವರೇ ನೀವು ಉಳವಿಗೆ ಹೋಗಿ ಅಲ್ಲಿ ರೇಚಿ ತಂದೆಗಳ ದರ್ಶನ ಮಾಡಿ ಅವರ ಆಶೀರ್ವಾದ ಪಡೆಯಿರಿ. ಅವರ ಆಶೀರ್ವಾದದ ಫಲದಿಂದ ನಿಮಗೆ ಸಂತಾನ ಪ್ರಾಪ್ತಿಯಾಗುತ್ತದೆ ಎಂದು ಹಾರೈಸುತ್ತಾರೆ. ಗುರುಗಳ ಅಪ್ಪಣೆಯಂತೆ ಉಳವಿಗೆ ಬಸವಲಿಂಗಯ್ಯನವರು ಪ್ರಯಾಣಿಸಿ ಮಹಾಮನೆಯ ಮುಂದಿರುವ ನೀರಿನ ಕೊಳದಲ್ಲಿ ಸ್ನಾನವನ್ನು ಮಾಡಿ ಚನ್ನಬಸವೇಶ್ವರ ದರ್ಶನವನ್ನು ಮಾಡುತ್ತಾರೆ. ರೇಚಿ ತಂದೆಗಳು ಇವರಿಗೆ ಉಳವಿಯ ಮಹಾಮನೆಯ ವೈಭವನ್ನೆಲ್ಲಾ ಅರುಹಿ, ಅಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ದರ್ಶನ ಮಾಡಿಸಿ, ಉಪಚರಿಸಿ, ನಿಮ್ಮಿಂದ ಒಬ್ಬ ಕಾರಣಿಕ ಶಿಶು ಉದಯವಾಗುವುದು ಎಂದು ಆಶೀರ್ವದಿಸಿ ಕಳಿಸುತ್ತಾರೆ. ಊರಿಗೆ ವಾಪಸ್ ಬಂದು ಬಸವಲಿಂಗಯ್ಯನವರು ನಡೆದ ಘಟನೆಗಳನ್ನೆಲ್ಲಾ ಮಡದಿಗೆ ತಿಳಿಸಿ ರೇಚಿ ತಂದೆಗಳು ಆಶೀರ್ವದಿಸಿ ಪ್ರಸಾದವನ್ನು ನೀಡುತ್ತಾರೆ. ಅದರ ಫಲದಂತೆ ಪಾರ್ವತಮ್ಮನವರು ಗರ್ಭ ಧರಿಸಿ ಗಂಡು ಮಗುವಿಗೆ ಜನ್ಮ ನೀಡುತ್ತಾರೆ.

ಮಗುವಿಗೆ ನಾಮಕರಣ ಮಾಡುವ ಸಮಯದಲ್ಲಿ ಕೂಸಿನ ಬಲಗಿವಿಯ ಮೇಲಿರುವ ಬಕ್ಕೆಯನ್ನು ನೋಡಿ ತಲೆಯ ಮೇಲಿರುವ ಗಂಟನ್ನು ನೋಡಿ ಅವನಿಗೆ ಬಕ್ಕೇಶ ಎಂದು ನಾಮಕರಣ ಮಡುತ್ತಾರೆ.

ಬಕ್ಕೇಶನು ತನ್ನ ಬಾಲ ಲೀಲೆಗಳೊಂದಿಗೆ ಬೆಳೆದು ಎಂಟು ವರ್ಷದವನಾದ ಆತನಿಗೆ ಜಂಗಮ ಮೂರ್ತಿಗಳಿಂದ ಶಿವದೀಕ್ಷೆಯನ್ನು ಮಾಡಿಸುತ್ತಾರೆ. ಪ್ರತಿದಿನ ತಪ್ಪದೇ ಸ್ನಾನ, ಪೂಜಾದಿ ನಿತ್ಯನೇಮಗಳನ್ನು ಮಾಡುತ್ತಾ ಹೆತ್ತವರ ಹಾಗೂ ಗ್ರಾಮದವರ ಕಣ್ಮಣಿಯಾಗಿ ಬಾಲ ಬಕ್ಕೇಶನು ಬೆಳೆಯುತ್ತಾನೆ. ಹನ್ನೆರಡು ವರ್ಷಗಳಾದಾಗ ತಂದೆ-ತಾಯಿಗಳಿಗೆ ನಮಸ್ಕರಿಸಿ ನಾನು ನನ್ನ ಇಷ್ಟಲಿಂಗಯ್ಯನ ಪ್ರೇರೇಪಣೆಯಂತೆ ದೇಶ ಸಂಚಾರಕ್ಕೆ ಹೊರಡುತ್ತೇನೆ. ನನ್ನ ಸ್ವಯದ ಜಂಗಮಾವಸ್ಥೆಯು ತೀರಿದೆ. ಇನ್ನು ಮುಂದೆ ಚರಜಂಗಮನಾಗಿ ಧರ್ಮಪ್ರಚಾರಕ್ಕೆ ಹೊರಡುತ್ತಿದ್ದೇನೆ. ಅಜ್ಞಾನದ ಅಂಧಕಾರದಲ್ಲಿರುವ ಸಮಾಜವನ್ನು ಸುಜ್ಞಾನದ ಬೆಳಕಿನಡೆಗೆ ಕೊಂಡೊಯ್ಯುವ ಪ್ರಯತ್ನ ಮಾಡುವಲ್ಲಿ ಗ್ರಾಮಕ್ಕೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಗಳಂತೆ ವಾಸ್ತವ್ಯ ಮಾಡಿ ಪಂಚಚಾರ, ಷಟ್‌ಸ್ಥಲ, ಅಷ್ಟಾವರಣಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅಹರ್ನಿಷಿ ದುಡಿಯಬೇಕಿದೆ ಎಂದು ಹೇಳಿ ತೆರಳುತ್ತಾರೆ.

ದೇಶ ಸಂಚಾರ ಮಡುತ್ತಾ ಮಾಡುತ್ತಾ ಗೋಕರ್ಣ, ಕಂಚಿ, ಕಾಳಹಸ್ತಿ, ಶ್ರೀಶೈಲ, ಕಾಶಿ ನಗರಗಳ ದರ್ಶನ ಮಾಡುತ್ತಾರೆ.

ತದನಂತರದಲ್ಲಿ ಮಲೆಮಹದೇಶ್ವರ, ನಂಜನಗೂಡು, ಎಡೆಯೂರು ಸಿದ್ಧಗಂಗಾ ಕ್ಷೇತ್ರಗಳನ್ನು ನೋಡಿಕೊಂಡು, ಕಲುಬರ್ಗಿಯ ಮಾರ್ಗದಿಂದ ಕಲ್ಯಾಣ ಪಟ್ಟಣವನ್ನು ಸೇರುತ್ತಾರೆ. ಅಲ್ಲಿ ಮೂರು ತಿಂಗಳುಗಳುವರೆಗೆ ವಾಸ್ತವ್ಯ ಮಾಡಿ ಹಾಳು ಬಿದ್ದಿರುವ ಮಹಾಮನೆ ನೋಡಿ ದುಃಖಿತರಾಗಿ ಕೂಡಲಸಂಗಮಕ್ಕೆ ಬಂದು ಬಸವಣ್ಣನವರು ಐಕ್ಯರಾದ ಸ್ಥಳವನ್ನು ದರ್ಶಿಸಿ ಮರಳಿ ಉಳವಿಗೆ ಬರುತ್ತಾರೆ. ಅಲ್ಲಿ ರೇಚಿ ತಂದೆಗಳ ಕೃಪಾಶೀರ್ವಾದದಲ್ಲಿ ಮೂರು ವರ್ಷಗಳವರೆಗೆ ತಂಗಿದ್ದು, ಅವರ ಅಪ್ಪಣೆಯಂತೆ ನೀನಿನ್ನು ಒಂದು ಕಡೆ ನೆಲೆಸು ಎಂಬುದನ್ನು ಪಾಲಿಸಲು ಅರಣ್ಯ ಮಾರ್ಗವಾಗಿ ಐರಣಿ ಕ್ಷೇತ್ರದ ಮೂಲಕ ಹರಿಹರ ಕ್ಷೇತ್ರಕ್ಕೆ ಬಂದು ಹೊಳೆಯ ದಡದಲ್ಲಿರುವ ಹಳೆಯ ಅರಳಿ ಮರವನ್ನೇ ಆಶ್ರಯವನ್ನಾಗಿಸಿಕೊಳ್ಳುತ್ತಾರೆ. ಅಲ್ಲಿಯೇ ಶಿವ ಪೂಜೆ ಸಾಯಂಕಾಲ ಹರಿಹರೇಶ್ವರನ ಸನ್ನಿಧಿಯಲ್ಲಿ ಭಜನೆ ಶಿವಾನುಭವ ನಡೆಯುತ್ತಿತ್ತು.

ಒಂದು ದಿವಸ ಬೆಳಿಗ್ಗೆ ಶಿವಪೂಜೆಯನ್ನು ಮುಗಿಸಿಕೊಂಡು ಭಜನೆ ಮಾಡುತ್ತಾ ಕುಳಿತಿದ್ದಾಗ ಆ ಊರಿನ ಗಣ್ಯರಾದ ಸತ್ಯಪ್ಪ ಶೆಟ್ಟಿಯು ಪ್ರತಿ ದಿವಸದಂತೆ ಬಕ್ಕಪ್ಪನವರ ದರ್ಶನವನ್ನು ಮಾಡಿ, ನಮ್ಮ ಮನೆಗೆ ದಯ ಮಾಡಿಸಿ ಮಧ್ಯಾಹ್ನ ಪೂಜೆ, ಪ್ರಸಾದಗಳು ನಮ್ಮ ಮನೆಯಲ್ಲಿಯೇ ನಡೆಯಬೇಕು ಎಂದು ಬಿನ್ನಹ ಮಾಡಿದಾಗ, ಬಕ್ಕಪ್ಪನವರು ನಿಮ್ಮ ವಂಶವು ವೃದ್ಧಿಯಾಗಲಿ ಆಗ ಬರುತ್ತೇವೆ ಎಂದು ಅಪ್ಪಣೆ ಕೊಡಿಸುತ್ತಾರೆ. ನಂತರ ಮತ್ತೆ ಗದಗ, ಐಹೊಳೆ, ಪಟ್ಟದಕಲ್ಲಿನ ಕಡೆಗೆ ಸಂಚಾರ ಹೊರಡುತ್ತಾರೆ, ಮುಂದೆ ಒಂದೆರಡು ವರ್ಷಗಳಲ್ಲಿಯೇ ಶೆಟ್ಟರಿಗೆ ಗಂಡು ಮಗುವಿನ ಜನನವಾಗುತ್ತದೆ.

ಕೊಟ್ಟ ವಚನದಂತೆ ಬಕ್ಕೇಶ್ವರರು ಸತ್ಯಪ್ಪ ಶೆಟ್ಟರಿಗೆ ದರ್ಶನವನ್ನು ಕೊಡುತ್ತಾರೆ. ಆಗ ಶೆಟ್ಟರು ಪೂಜ್ಯರೇ ಬೆಳಗಿನ ಪೂಜೆ ಇಲ್ಲಿ ನಡಿತಾ ಇದೆ ನಿಜ. ಆದರೆ ಮುಂದೆ ಮಳೆಗಾಲದಲ್ಲಿ ತಮಗೆ ಬಹಳ ತೊಂದರೆಯಾಗುತ್ತದೆ. ಹೊಳೆಯು ತುಂಬಿ ಹರಿಯುತ್ತದೆ. ಅದಕ್ಕಾಗಿ ತಮ್ಮ ಪೂಜೆಗೆಂದು ತಾವು ತೋರಿದಲ್ಲಿ ಮಠವನ್ನು ಕಟ್ಟಿಸುತ್ತೇನೆ ಎಂದು ಭಿನ್ನವಿಸಿಕೊಳ್ಳುತ್ತಾರೆ.

ಹಿಂದೆ ಉಳವಿಯಲ್ಲಿ ರೇಚಿ ತಂದೆಗಳು ಒಂದು ಕಡೆ ನಿಂತು ಪರಜಂಗಮಾವಸ್ಥೆಯನ್ನು ಕೈಗೊಳ್ಳಿ ಎಂದು ಹೇಳಿದ ಮಾತು ನೆನಪಿಗೆ ಬಂದು ಶೆಟ್ಟರೇ ಮಠ ನಮಗೆ ಇಲ್ಲಿ ಬೇಡ 'ದೇವನಗರಿ' ಯೇ (ದಾವಣಗೆರೆ) ಶ್ರೇಷ್ಠವಾದ ಸ್ಥಾನ, ಅಲ್ಲಿ ಆಗಾಗ ಚಿನ್ಮೂಲಾದ್ರಿಯ ಮಹಾಸನ್ನಿಧಿಯವರು ಬಂದು ಆ ಸ್ಥಾನವನ್ನು ಸುಕ್ಷೇತ್ರವನ್ನಾಗಿ ಮಾಡಿದ್ದಾರೆ. ಅಲ್ಲಿಯೇ ನಮ್ಮ ಪರಜಂಗಮಾವಸ್ಥೆಯು ಆಗಬೇಕೆಂದು ತಿಳಿಸುತ್ತಾರೆ.

ಅದಕ್ಕೆ ಒಪ್ಪಿದ ಶೆಟ್ಟರನ್ನು ದಾವಣಗೆರೆಗೆ ಕರೆದುಕೊಂಡು ಬಂದು ದುರ್ಗಾಂಬಿಕಾ ದೇವಸ್ಥಾನದ ಹತ್ತಿರದಲ್ಲಿ ಒಂದು ಜಾಗವನ್ನು ತೋರಿಸಿದ ಪ್ರಕಾರ ಅಲ್ಲಿ ಮಠವನ್ನು ಕಟ್ಟಲಿಕ್ಕೆ ಭಕ್ತ ಜನರು ಪ್ರಾರಂಭಿಸುತ್ತಾರೆ.

ಶ್ರೀ ಮಠದಲ್ಲಿ ಪ್ರತಿನಿತ್ಯ ಪೂಜಾ, ಭಜನೆ, ಶಿವಚಿಂತನೆ, ಶಿವಕೀರ್ತನೆಗಳು ತಪ್ಪದೇ ನಡೆಯುತ್ತಾ ಬರುತ್ತಿದ್ದು ಶ್ರೀಗುರು ಬಕ್ಕೇಶ್ವರರ ಕೀರ್ತಿ ಎಲ್ಲಾ ಕಡೆಗೂ ಹರಡಿತು. ಆಗಿಂದಾಗ್ಗೆ ಶಿವಾನುಭವ ಗೋಷ್ಠಿಗಳು, ಹೆಬ್ಬಾಳು ಶ್ರೀರುದ್ರೇಶ್ವರ ಸ್ವಾಮಿಗಳು ಚಿತ್ರದುರ್ಗದ ಶ್ರೀ ರಾಜವಟ್ಟೀ ಮುರುಘರಾಜೇಂದ್ರ ಮಹಾ ಸ್ವಾಮಿಗಳವರು ದಯಮಾಡಿ ಸರ್ವ ಭಕ್ತರಿಗೆ ಲಿಂಗಾಂಗ ಸಾಮರಸ್ಯ ಸುಜ್ಞಾನವನ್ನು ಬೀರುತ್ತಿದ್ದರು. ಅಂದಿನಿಂದ ಜ್ಞಾನದ ಕೇಂದ್ರವಾಗಿ ದಾವಣಗೆರೆ ಪ್ರಸಿದ್ಧಿಯನ್ನು ಪಡೆಯಿತು.

ಆ ಕಾಲದಲ್ಲಿ ಮೈಸೂರು ದೇಶಕ್ಕೆ ಮುಮ್ಮಡಿ ಕೃಷ್ಣರಾಜ ಒಡೆಯರು ಮಹಾರಾಜರಾಗಿ ಧರ್ಮದಿಂದ ರಾಜ್ಯವನ್ನಾಳುತ್ತಿದ್ದರು. ಕಾರಣಾಂತರದಿಂದ ಇವರಿಂದ ಬ್ರಿಟೀಷರು ರಾಜ್ಯವನ್ನು ಕಸಿದುಕೊಂಡರು. ಕಂದಾಯವನ್ನು ಹೆಚ್ಚಾಗಿ ವಿಧಿಸಿದರು. ಅದು ಸಾಮಾನ್ಯ ಜನರಿಗೆ ತುಂಬಾ ಹೊರೆಯಾಗಿತ್ತು. ಆಗ ಊರಿನ ಜನರೆಲ್ಲಾ ಸಭೆ ಸೇರಿ ಮೈಸೂರಿಗೆ ನಿಯೋಗ ಹೊರಟರು, ತಿಂಗಳಾದರೂ ನಿಯೋಗಕ್ಕೆ ತೆರಳಿದ್ದ ಜನರಿಗೆ ಮಹಾರಾಜರ ದರ್ಶನ ಭಾಗ್ಯವೇ ಲಭಿಸಲಿಲ್ಲ. ಆಗ ದಾವಣಗೆರೆಯ ಭಕ್ತರೆಲ್ಲರೂ ಬಕ್ಕೇಶ್ವರರಲ್ಲಿಗೆ ವಿಷಯವನ್ನು ತಿಳಿಸಿದಾಗ, ಅವರು ಅಲ್ಲಿ ಸುಖವಾಗಿ ಇದ್ದಾರೆ, ಮಹಾರಾಜರ ದರ್ಶನ ಭಕ್ತರಿಗೆ ಲಭಿಸಿಲ್ಲ, ನಮ್ಮ ದುರ್ಗೆ (ದಾವಣಗೆರೆಯ ದುಗ್ಗಮ್ಮ) ಯನ್ನು ಕಳಿಸಿ ಆ ಕೆಲಸ ನೆರವೇರಿಸಿ ಕೊಡುವುದಾಗಿ ಅಪ್ಪಣೆ ಮಾಡುತ್ತಾರೆ.

ದುಗ್ಗಮ್ಮನನ್ನು ಕುರಿತು ಬಕ್ಕೇಶ್ವರರು ಈ ಊರಿನ ಗ್ರಾಮದೇವತೆ ನೀನು, ನಿನ್ನ ಮಕ್ಕಳನ್ನು ಕಾಪಾಡುವ ಶಕ್ತಿ ನಿನ್ನಲ್ಲಿದೆ. ಈ ಕೆಲಸವನ್ನು ಪೂರೈಸುವ ಹೊಣೆ ನಿನ್ನದಾಗಿದೆ ಎಂದು ಅಪ್ಪಣೆ ಮಾಡುತ್ತಾರೆ.

ಅಂದೇ ರಾತ್ರಿ ಮಹಾರಾಜರ ಕನಸಿನಲ್ಲಿ ಚಾಮುಂಡೇಶ್ವರಿ ದೇವಿಯು ಪ್ರತ್ಯಕ್ಷಳಾಗಿ, ನಾನೇ ದಾವಣಗೆರೆಯಲ್ಲಿ ದುಗ್ಗಮ್ಮನೆಂಬ ಹೆಸರಿನಿಂದ ಗ್ರಾಮ ದೇವತೆಯಾಗಿರುವೆ, ಕೂಡಲೇ ಅವರ ಮನವಿಯನ್ನು ಮನ್ನಿಸಿ ದಾವಣಗೆರೆಗೆ ಕಳುಹಿಸಿಕೊಡಬೇಕೆಂದು ಆದೇಶಿಸಿದ ಪ್ರಕಾರ ಮಹಾರಾಜರು ಅದರಂತೆ ನಡೆದುಕೊಂಡರು.

ಹೀಗೆ ಅನೇಕ ಲೀಲೆಗಳನ್ನು ತೋರುತ್ತಾ ಶ್ರೀ ಗುರು ಬಕ್ಕೇಶ್ವರರು ಒಂದು ದಿವಸ ಮಠದಲ್ಲಿ ಎಲ್ಲಾ ಭಕ್ತರನ್ನು ಸೇರಿಸಿ ಈ ಅವತಾರವನ್ನು ಮುಗಿಸಿ ತಮ್ಮ ಬಳಿ ಬರಬೇಕೆಂದು ತಿಳಿಸಿರುವ ಪರಶಿವನ ಅಪ್ಪಣೆಯನ್ನು ಎಲ್ಲರಿಗೂ ತಿಳಿಸಿದರು. ಭಕ್ತಗಣಗಳವರು ಶೋಕಸಾಗರದಲ್ಲಿ ಮುಳುಗಿ ಇನ್ನೂ ಕೆಲ ವರ್ಷಗಳ ಕಾಲ ನಮ್ಮನ್ನು ಉದ್ಧರಿಸಬೇಕೆಂದು ಪಾದಕ್ಕೆ ಬಿದ್ದು ಬೇಡಿಕೊಂಡಾಗ ಶ್ರೀಗಳು ಶಿವನ ಅಪ್ಪಣೆಯನ್ನು ಯಾರೂ ಮೀರಬಾರದು. ಆತ ಇರಿಸಿದಲ್ಲಿ ಇರಬೇಕು ಎಂದು ಸಮಾಧಾನ ಮಾಡುತ್ತಾರೆ.

ಭಕ್ತ ಜನಸಾಗರ ದುಃಖದಿಂದ ಇದೇ ಮಠದಲ್ಲಿಯೇ ತಮ್ಮ ಗದ್ದುಗೆಯಾಗಲಿ ಎಂದಾಗ ಅದಕ್ಕೆ ಬಕ್ಕಪ್ಪಗಳು ಒಪ್ಪದೇ ತಮ್ಮ ಗದ್ದುಗೆಯ ಈ ಮಠದ ಆಗ್ನೇಯ ದಿಕ್ಕಿನಲ್ಲಿರುವ ಸುಂದರವಾದ ತೋಟದಲ್ಲಿ ನಿರ್ಮಿಸಿರಿ ಎಂದಾಗ, ಜಾಗ ಸುಂದರವಾಗಿದೆ. ಆದರೆ, ಊರಿಗೆ ದೂರವಾಗುವುದರಿಂದ ಭಕ್ತರಿಗೆ ಹೋಗಿ ಬರಲು ತೊಂದರೆಯಾಗುತ್ತದೆ ಎಂದಾಗ ಬಕ್ಕೇಶ್ವರರು ನೋಡಿ ಅದು ಮುಂದಿನ ಶತಮಾನದಲ್ಲಿ ಬೆಳೆದು ಚೌಕಿಪೇಟೆಯೆಂಬ ಹೆಸರಿನಿಂದ ಪ್ರಸಿದ್ಧವಾಗಿ ಊರಿನ ಮಧ್ಯದಲ್ಲಿ ಆಗುವುದು ಎಂದು ತಿಳಿಸುತ್ತಾರೆ.

ನಂತರ ಚೈತ್ರಶುದ್ಧ ಪಂಚಮಿಯ ಸೋಮವಾರ ದಿವಸ ಶಿವಾನುಭವ ಗೋಷ್ಠಿಯನ್ನು ಪೂರೈಸಿ ಮಹಾಲಿಂಗವನ್ನು ನೋಡುತ್ತಾ ಲಿಂಗದಲ್ಲಿ ಮುಳುಗಿ ಹರಹರ ಮಹಾದೇವ ಶಂಭೋ ಬಸವೇಶ ಎನ್ನುತ್ತಾ ತಮ್ಮ ಮಹಾಲಿಂಗದಲ್ಲಿ ಬೆರೆಯುತ್ತಾರೆ.

ಶ್ರೀ ಶ್ರೀಗಳವರ ಇಚ್ಛೆಯಂತೆ ಅವರು ತೋರಿಸಿದ ಸ್ಥಳದಲ್ಲಿ ಕ್ರಿಯಾಸಮಾಧಿಯನ್ನು ಸಿದ್ಧಗೊಳಿಸಿದರು. ಚಿತ್ರದುರ್ಗದ ಮಹಾಸನ್ನಿಧಿಯವರು ಬಕ್ಕೇಶ್ವರ ಶ್ರೀಗಳವರ ಕಳೇಬರಕ್ಕೂ ವಿಭೂತಿ, ಪತ್ರೆ, ಪುಷ್ಪಾದಿಗಳನ್ನು ಧರಿಸಿ ಪೂಜಿಸುತ್ತಾ ಬಕ್ಕೇಶನ ಮಹಾಲಿಂಗ ಕಳೇಬರವನ್ನು ವಿಭೂತಿಯಿಂದ ಸಮಾಧಿಗೊಳಿಸುತ್ತಾರೆ.

ಗದ್ದುಗೆಯ ಕಟ್ಟಳೆಯ ಕ್ರಿಯೆಯನ್ನು ಪೂರೈಸಿ ಗದ್ದುಗೆ ಮತ್ತು ಮಠವನ್ನು ಸುಂದರವಾಗಿ ನಿರ್ಮಾಣ ಮಾಡುತ್ತಾರೆ. ಅಂದಿನಿಂದ ಇಂದಿನವರೆಗೂ ಬಕ್ಕೇಶ್ವರರ ಗದ್ದುಗೆಗೆ ನಿರಂತರವಾಗಿ ಪೂಜೆ, ಶ್ರಾವಣ ಮಾಸದಲ್ಲಿ ಹಾಗೂ ಧನುರ್ಮಾಸದಲ್ಲಿ ವಿಶೇಷ ಪೂಜೆ, ಕಾರ್ತಿಕೋತ್ಸವ ಹಾಗೂ 'ಚೈತ್ರ ಶುದ್ಧ ಪಂಚಮಿ' (ಯುಗಾದಿ ನಂತರದ 5ನೇ ದಿವಸ) ಯಂದು ಮಹಾರಥೋತ್ಸವವು ವಿಜೃಂಭಣೆಯಿಂದ ನಡೆದುಕೊಂಡು ಬರುತ್ತಿದೆ. ಹೀಗೆ ಭಕ್ತಕೋಟಿಯ ಮನೆದೇವರಾಗಿ, ಮನದ ದೇವರಾಗಿ, ಆರಾಧ್ಯ ದೇವರಾಗಿ, ಶ್ರೀ ಗುರು ಬಕ್ಕೇಶ್ವರರು ಸಲಹುತ್ತಾ ಬರುತ್ತಿದ್ದಾರೆ. ಉಣುವಾಗ, ಉಡುವಾಗ, ದೀಪ ಹಚ್ಚುವಾಗ ಶ್ರೀ ಗುರು ಬಕ್ಕೇಶ್ವರರನ್ನು ನೆನೆಯುವ ಮನೆತನಗಳು ದಿನೇ ದಿನೇ ಪ್ರವರ್ಧಮಾನಕ್ಕೇರುತ್ತಿರುವುದೇ ಬಕ್ಕೇಶ್ವರರ ಆಶೀರ್ವಾದ ಫಲ.

**- ಎಂ.ಕೆ. ಬಕ್ಕಪ್ಪ, ದಾವಣಗೆರೆ**
ಮೊ : 99162 42588

## ಹರಪನಹಳ್ಳಿ : ಇಂದು ಜೆಡಿಎಸ್-ಬಿಜೆಪಿ ಮೈತ್ರಿ ಘೋಷಿಸುವ ಸಭೆ

ಲೋಕಸಭೆ ಚುನಾವಣೆಯನ್ನು ಜನತಾದಳ (ಜಾತ್ಯತೀತ) ಮತ್ತು ಬಿಜೆಪಿ ಮೈತ್ರಿ ಸಹಭಾಗಿತ್ವದಲ್ಲಿ ನಡೆಸಲು ತಿರ್ಮಾನಿಸಿದ್ದು, ಹರಪನಹಳ್ಳಿ ತಾಲ್ಲೂಕಿನ ಜೆಡಿಎಸ್ ಮತ್ತು ಬಿಜೆಪಿ ಬಹಿರಂಗ ಮೈತ್ರಿ ಘೋಷಿಸುವ ಸಾಮಾನ್ಯ ಸಭೆಯನ್ನು ಪಟ್ಟಣದ ನಟರಾಜ ಕಲಾಭವನದಲ್ಲಿ ಇಂದು ಕರೆಯಲಾಗಿದೆ.

ಸಭೆಗೆ ಮೈತ್ರಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ, ಸಂಸದ ಜಿ.ಎಂ.ಸಿದ್ದೇಶ್ವರ, ಹಗರಿಬೊಮ್ಮನಹಳ್ಳಿ ಜೆಡಿಎಸ್ ಶಾಸಕ ಕೆ. ನೇಮಿರಾಜನಾಯ್ಕ. ಹರಿಹರದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್. ದಾವಣಗೆರೆ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ. ವಿಜಯನಗರ ಜಿಲ್ಲಾಧ್ಯಕ್ಷ ಕೆ.ಕೊಟ್ರೇಶಪ್ಪ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಶಿರಹಟ್ಟಿ ದಂಡೆಪ್ಪ ತಿಳಿಸಿದ್ದಾರೆ.

## ಬಹುಜನ ಸಮಾಜ ಪಾರ್ಟಿಯಿಂದ 15 ರಂದು ಹನುಮಂತಪ್ಪ ನಾಮಪತ್ರ ಸಲ್ಲಿಕೆ

ದಾವಣಗೆರೆ, ಏ.12- ಬಹುಜನ ಸಮಾಜ ಪಾರ್ಟಿಯಿಂದ ದಾವಣಗೆರೆ ಲೋಕಸಭಾಕ್ಷೇತ್ರದ ಅಭ್ಯರ್ಥಿಯಾಗಿ ಇದೇ ದಿನಾಂಕ 15ರಂದು ನಾಮಪತ್ರ ಸಲ್ಲಿಸುವುದಾಗಿ ಪಕ್ಷದ ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕುಟುಂಬ ರಾಜಕಾರಣದಿಂದ ಜನರು ಬೇಸತ್ತಿದ್ದು, ನಮ್ಮ ಪಕ್ಷವನ್ನು ಬೆಂಬಲಿಸಲಿ ದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಾಮಪತ್ರ ಸಲ್ಲಿಕೆ ಸಮಯದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್. ಮುನಿಯಪ್ಪ, ಬೆಂಗಳೂರು ವಿಭಾಗದ ಉಸ್ತುವಾರಿ ಎಂ.ನಾಗೇಶ್, ರಾಜ್ಯ ಕಾರ್ಯದರ್ಶಿ ಹೆಚ್.ಮಲ್ಲೇಶ್ ಇತರರು ಭಾಗವಹಿಸಲಿದ್ದಾರೆ ಎಂದರು. ಪಕ್ಷದ ಮುಖಂಡ ಎಂ.ಸಿ. ಮೋಹನ್ ಕುಮಾರ್ ಮಾತನಾಡಿ, ಭಾರತ ಸಂವಿಧಾನದ ಪೂರ್ವ ಪೀಠಿಕೆಯನ್ನು ಯಥಾ ಸ್ಥಿತಿಯಲ್ಲಿ ಜಾರಿಗೆ ತರುವುದೇ ನಮ್ಮ ಪಕ್ಷದ ಗ್ಯಾರಂಟಿಯಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಕುಬೇರಪ್ಪ, ಸಂಯೋಜಕ ಕೃಷ್ಣಪ್ಪ ಕುಂಕೋವಾ, ಮುಖಂಡ ಸಂತೋಷ್ ಎಸ್., ಜಿಲ್ಲಾ ಕಾರ್ಯದರ್ಶಿ ಜೆ.ಡಿ. ಕೃಷ್ಣಮೂರ್ತಿ ಉಪಸ್ಥಿತರಿದ್ದರು.

## ಚೀಲೂರಲ್ಲಿಂದು ವೀರಭದ್ರೇಶ್ವರ ಸ್ವಾಮಿ ಪ್ರವೇಶೋತ್ಸವ



ನ್ಯಾಮತಿ ತಾಲ್ಲೂಕಿನ ಚೀಲೂರು ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಈಶ್ವರ ದೇವಾಲಯದ ಪ್ರವೇಶೋತ್ಸವ, ಕಳಸಾರೋಹಣ, ಧರ್ಮಸಭೆ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಲಕ್ಷ್ಮಿರಂಗನಾಥ ಸ್ವಾಮಿ ಕೆಂಡದಾರ್ಚನೆ ಹಾಗೂ ರಥೋತ್ಸವದ ಪ್ರಯುಕ್ತ ಇಂದು ಬೆಳಗಿನ ಜಾವ 3 ರಿಂದ 4.30 ರವರೆಗೆ ಸುಮಂಗಲಿಯರಿಂದ ಗಂಗೆ ಪೂಜೆ, ಶ್ರೀ ವೀರಭದ್ರೇಶ್ವರ ಸ್ವಾಮಿ, ಶ್ರೀ ಈಶ್ವರ ದೇವರ ದೇವಾಲಯಗಳ ಪ್ರವೇಶ, ಗಣಪತಿ ಪೂಜೆ, ಉಮಾಮಹೇಶ್ವರಿ ಸ್ವಸ್ತಿ ಪುಣ್ಯಾಹ ನಾಂದಿ ಸಮಾರಾಧನೆ ಗುರುಕಲಶ, ನವಗ್ರಹ ಅಷ್ಟದಿಕ್ಪಾಲಕರ ಹಾಗೂ ಗ್ರಾಮಶಾಂತಿಗಾಗಿ ಮಹಾಗಣಪತಿ ರುದ್ರಹೋಮ, ವಾಸ್ತುಶಾಂತಿ, ಮೃತ್ಯುಂಜಯ ಹೋಮಗಳು ನಡೆಯುತ್ತವೆ.

ಬೆಳಿಗ್ಗೆ 8.45 ರಿಂದ 9 ರವರೆಗೆ ಸುಬ್ರಹ್ಮಣ್ಯ ದೇವರ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಲಾಗುವುದು. ಮಧ್ಯಾಹ್ನ 1 ಕ್ಕೆ ಶ್ರೀ ವೀರಭದ್ರೇಶ್ವರ ದೇವಾಲಯದ ಆವರಣದಲ್ಲಿ ಧರ್ಮಸಭೆ ನಡೆಯುತ್ತದೆ ಎಂದು ಹೇಳಿದರು.

ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಶಾಸಕ ಡಿ.ಜಿ. ಶಾಂತನಗೌಡ, ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಸಾಧು ವೀರಶೈವ ಲಿಂಗಾಯತ ಸಮಾಜದ ನ್ಯಾಮತಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವಪ್ಪ ಕೋಡಿಕೊಪ್ಪ, ಹೊನ್ನಾಳಿ ತಾಲ್ಲೂಕು ಘಟಕದ ಅಧ್ಯಕ್ಷ ಹೆಚ್.ಸಿ.ಗದಿಗೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಜಿ. ವಿಶ್ವನಾಥ, ತಾ.ಪಂ. ಮಾಜಿ ಅಧ್ಯಕ್ಷ ಡಿ.ಜಿ. ರಾಜಪ್ಪ, ಮಾಜಿ ಸದಸ್ಯ ಸಿ.ಎಲ್. ಸತೀಶ್, ಚೀಲೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ರೂಪ, ಚೀಲೂರು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಾಲಯ ಜೀರ್ಣೋದ್ಧಾರ ಸಮಿತಿಯ ಕೆ.ಪಿ. ರವಿಕುಮಾರ್ ಗೌಡ್ರು, ಚೀಲೂರು ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಸಮಿತಿಯ ಯತೀಶ್ ಚಂದ್ರ ಕೋರಿ, ಮುಖಂಡರಾದ ಹೆಚ್. ಶಿವಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಉಪನ್ಯಾಸಕ ಎಂ.ಎನ್. ವಿನಾಯಕ ಉಪನ್ಯಾಸ ನೀಡುವರು. ಚೀಲೂರು ಗ್ರಾಮದ ಜಿ. ಚಂದ್ರಶೇಖರ ಗೌಡ್ರು ಅಧ್ಯಕ್ಷತೆ ವಹಿಸಲಿದ್ದಾರೆ.

## ಮತದಾನ ಬಹಿಷ್ಕರಿಸದಂತೆ ಗ್ರಾಮಸ್ಥರ ಮನವೊಲಿಸಿದ ತಹಶೀಲ್ದಾರ್ ಗಿರೀಶ್‌ಬಾಬು



ಹರಪನಹಳ್ಳಿ, ಏ. 12 - ತಾಲೂಕಿನ ಹಂಪಾಪುರ ಗ್ರಾಮಕ್ಕೆ ಶುಕ್ರವಾರ ತಹಶೀಲ್ದಾರ್ ಗಿರೀಶ್‌ಬಾಬು ಭೇಟಿ ನೀಡಿ ಲೋಕಸಭಾ ಚುನಾವಣೆಯಲ್ಲಿ ಮತದಾನ ಬಹಿಷ್ಕಾರ ಮಾಡದಂತೆ ಗ್ರಾಮಸ್ಥರ ಮನವೊಲಿಸಿದರು.

ಬಸ್ ಸೌಲಭ್ಯ ಸೇರಿದಂತೆ ಇತರೆ ಮೂಲ ಭೂತ ಸೌಕರ್ಯಗಳ ಕೊರತೆಯ ಹಿನ್ನೆಲೆಯಲ್ಲಿ ಇತ್ತೀಚೆಗೆ ಗ್ರಾಮಸ್ಥರು ಗ್ರಾಮದಲ್ಲಿ ಸಭೆ ನಡೆಸಿ ಲೋಕಸಭೆ ಚುನಾವಣೆಯಲ್ಲಿ ಮತದಾನ ಬಹಿಷ್ಕಾರ ಮಾಡುವ ನಿರ್ಧಾರ ಕೈಗೊಂಡಿದ್ದರು.

ಈ ಹಿನ್ನೆಲೆಯಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಸಾರಿಗೆ ಇಲಾಖೆ ಮತ್ತು ಗ್ರಾಮ ಪಂಚಾಯ್ತಿ ಅಧಿಕಾರಿಗಳ ತಂಡ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಜೊತೆ ಸಭೆ ನಡೆಸಿ ಗ್ರಾಮಕ್ಕೆ ಬಸ್ ಸೌಲಭ್ಯ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳ ಕೊರತೆ ನಿವಾರಣೆಗೆ ಕೂಡಲೇ ಕ್ರಮವಹಿಸಲಾಗುವುದು ಮತದಾನ ಬಹಿಷ್ಕಾರ ಮಾಡದಂತೆ ಮನವಿ ಮಾಡಿದರು. ಇದಕ್ಕೆ ಗ್ರಾಮಸ್ಥರು ಒಪ್ಪಿ ಮತದಾನ ಬಹಿಷ್ಕಾರದ ನಿರ್ಧಾರವನ್ನು ಹಿಂಪಡೆದಿದ್ದಾರೆ.

ಈ ಸಂದರ್ಭದಲ್ಲಿ ಸಾರಿಗೆ ಇಲಾಖೆ ಅಧಿಕಾರಿ ಮಂಜುಳಾ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಕೆ.ಆನಂದ ನಾಯ್ಕ್, ಶಿಕ್ಷಣ ಇಲಾಖೆಯ ವೀರೇಶ, ನಂದೀಶಬಾಬು, ಗ್ರಾಮದ ಮುಖಂಡರಾದ ಬಿ.ಲಕ್ಷ್ಮಣ್, ಕರಿಬಸಪ್ಪ, ಮಲ್ಲಿಕಾರ್ಜುನ, ಗಂಗಪ್ಪ, ದುರುಗಪ್ಪ, ಬಸವರಾಜ, ಗೋಣೆಪ್ಪ, ಹಳ್ಳಿ ಪ್ರಕಾಶ, ಅಂಗಡಿ ಬಸವರಾಜ, ಬಣಕಾರ ಪ್ರಕಾಶ, ಬಸಪ್ಪ, ಷಣ್ಮುಖಪ್ಪ, ಅಂಜಿನಪ್ಪ, ಕೊಟ್ರೇಶ, ತಿರುಪತಿ, ಗಿರೀಶ ಸೇರಿದಂತೆ ಇತರರು ಇದ್ದರು.

## ನಾಳೆ ರಶ್ಮಿ ಶಾಲೆ ಪ್ರವೇಶಕ್ಕೆ ಸಂದರ್ಶನ

ದಾವಣಗೆರೆ, ಏ. 12- ಕುಂದುವಾಡ ಸಮೀಪದ ಡಾ. ಡಿ.ಪರ್ವತಪ್ಪ ಮೆಮೋರಿಯಲ್ ಟ್ರಸ್ಟ್‌ನ 'ರಶ್ಮಿ' ಹೆಣ್ಣು ಮಕ್ಕಳ ಉಚಿತ ವಸತಿಯುತ ಪ್ರಾಥಮಿಕ ಮತ್ತು ಪ್ರೌಢಶಾಲೆ (ಜಿಎಂಐಟಿ ಕಾಲೇಜು ಎದುರುಗಡೆ)ಯಲ್ಲಿ 1 ನೇ ತರಗತಿಯಿಂದ 9 ನೇ ತರಗತಿವರೆಗೆ ಓದ ಬಯಸುವ ಹೆಣ್ಣು ಮಕ್ಕಳಿಗೆ ಶಾಲಾ ಆವರಣದಲ್ಲಿ ನಾಡಿದ್ದು ದಿನಾಂಕ 14 ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಸಂದರ್ಶನ ಏರ್ಪಡಿಸಲಾಗಿದೆ.

ಅನಾಥ, ಬಡ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶಾವಕಾಶವಿದ್ದು, ಸೇರ ಬಯಸುವ ವಿದ್ಯಾರ್ಥಿನಿಯರು ಪಾಲಕರೊಂದಿಗೆ ಸಂದರ್ಶನಕ್ಕೆ ಹಾಜರಾಗಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9916362288 ಕ್ಕೆ ಸಂಪರ್ಕಿಸುವಂತೆ ಶಾಲಾ ಮುಖ್ಯೋಪಾಧ್ಯಾಯರು ಮನವಿ ಮಾಡಿದ್ದಾರೆ.


### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಮುದೇಗೌಡ್ರು ಬಸವರಾಜಪ್ಪನವರು**

ದಿ ದಾವಣಗೆರೆ ಆಯಿಲ್ ಮಿಲ್ ಅಂಡ್ ಆಯಿಲ್ ಸೀಡ್ಸ್ ಡೀಲರ್ ಅಸೋಸಿಯೇಷನ್‌ನ ಖಜಾಂಚಿ ಇವರು ದಿನಾಂಕ : 11.04.2024ರಂದು ಬೆಳಿಗ್ಗೆ 5.00 ಗಂಟೆಗೆ ನಿಧನರಾಗಿದ್ದು, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

**ಇಂತಿ ದುಃಖತಪ್ತರು :**
**ದಿ ದಾವಣಗೆರೆ ಆಯಿಲ್ ಮಿಲ್ ಅಂಡ್ ಆಯಿಲ್ ಸೀಡ್ಸ್ ಡೀಲರ್ ಅಸೋಸಿಯೇಷನ್ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರುಗಳು**
**ಎಪಿಎಂಸಿ ಯಾರ್ಡ್ ಸಿ ಬ್ಲಾಕ್, ದಾವಣಗೆರೆ.**

### ಭಾವಪೂರ್ಣ ಶ್ರದ್ಧಾಂಜಲಿ




ದಾವಣಗೆರೆ ಕ್ಲಬ್‌ನ ಹಿರಿಯ ಸದಸ್ಯರು ಹಾಗೂ ಮಾಜಿ ಕಾರ್ಯದರ್ಶಿಗಳು, ಕ್ಲಬ್‌ನ ಅಭಿವೃದ್ಧಿಗೆ ಶ್ರಮಿಸಿದ

**ಶ್ರೀ ಮುದೇಗೌಡ್ರು ಬಸವರಾಜಪ್ಪ**

ಅವರ ನಿಧನಕ್ಕೆ ಸಂತಾಪ ಸೂಚಿಸುತ್ತಾ, ಅವರ ಕುಟುಂಬ ವರ್ಗಕ್ಕೆ ದೇವರು ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು : **ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ, ದಾವಣಗೆರೆ ಕ್ಲಬ್.**

॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ॥ ಶ್ರೀ ಬಸವೇಶ್ವರ ಪ್ರಸನ್ನ ॥




### ಕೈಲಾಸ ಶಿವಗಣಾರಾಧನೆ ಆಹ್ವಾನ



ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ ವಾಸಿ
**ಶ್ರೀ ಜಿ.ಎಂ. ಹನುಮಗೌಡ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 09.04.2024ನೇ ಮಂಗಳವಾರ ರಾತ್ರಿ 9.25ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಮಹದೇವಮ್ಮ ರುದ್ರಗೌಡ**
(ದಿ. ಶ್ರೀ ಜಿ.ಎಂ. ರುದ್ರಗೌಡ ಇವರ ಧರ್ಮಪತ್ನಿ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
**ದಿನಾಂಕ 13.04.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ**
**ಕೊಕ್ಕನೂರಿನಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : **ಶ್ರೀಮತಿ ಮಂಜುಳಾ ಜಿ.ಎಂ. ಶ್ರೀ ಹನುಮಗೌಡ ಮತ್ತು ಮಕ್ಕಳು**
**ಶ್ರೀಮತಿ ಕವಿತಾ ಶ್ರೀ ಜಿ.ಎಂ. ಪ್ರಕಾಶ್ ಮತ್ತು ಮಕ್ಕಳು**
**ಶ್ರೀಮತಿ ಸುನೀತಾ ಶ್ರೀಮತಿ ಪೂರ್ಣಿಮಾ ಶ್ರೀ ಕೆ. ರಾಜು ಮತ್ತು ಮಕ್ಕಳು**
**ದಿ. ಶ್ರೀ ಕೆ. ಮಲ್ಲಪ್ಪಗೌಡ್ರು ಇವರ ಮಕ್ಕಳು, ಮೊಮ್ಮಕ್ಕಳು ಮತ್ತು ಅಳಿಯಂದಿರು**
**ಮಲ್ಲನಗೌಡ್ರ ವಂಶಸ್ಥರು, ಕಂಭತ್ತಹಳ್ಳಿ ವಂಶಸ್ಥರು ಮತ್ತು ಜಿಗಳಿ ಹಾಗೂ ಕೊಕ್ಕನೂರು ಗ್ರಾಮಸ್ಥರು**
**ಮೊ : 99407 47601, 99028 55101**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 11.04.2024ರಂದು ನಿಧನರಾದ ನಮ್ಮ ಕೇಂದ್ರದ ಮಾಜಿ ಕಾರ್ಯದರ್ಶಿಯವರಾದ
**ಶ್ರೀ ಮುದೇಗೌಡ್ರು ಬಸವರಾಜಪ್ಪನವರು**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇವೆ.
**ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು, ದಾವಣಗೆರೆ.**
**ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್, ವಿದ್ಯಾನಗರ, ದಾವಣಗೆರೆ.**

### ಭಾವಪೂರ್ಣ ಶ್ರದ್ಧಾಂಜಲಿ




ಆಪ್ತ ಗೆಳೆಯ
**ಶ್ರೀ ಮುದೇಗೌಡ್ರು ಬಸವರಾಜಪ್ಪನವರು**
ಇವರು, ದಿನಾಂಕ : 11.04.2024ರಂದು ಬೆಳಿಗ್ಗೆ 5 ಗಂಟೆಗೆ ನಿಧನರಾಗಿದ್ದು. ಅವರ ಕುಟುಂಬಕ್ಕೆ ಭರಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು : **ಎಂ.ಹೆಚ್. ರಂಗನಾಥ್ (ಬಿ.ಕಾಂ), ಮಾಜಿ ಅಧ್ಯಕ್ಷರು ಜಿಲ್ಲಾ ದೇವಾಂಗ ಸಂಘ ಹಾಗೂ ಹನುಮಂತಪ್ಪ ಕುಂಬಳೂರು.**


### ವಿದ್ಯಾ ಪೈ ನಿಧನ



ದಾವಣಗೆರೆ ಸಿಟಿ, ಪಿ.ಜೆ. ಬಡಾವಣೆ, 8 ನೇ ಮೇನ್, 5 ನೇ ಕ್ರಾಸ್, ಸೇಂಟ್ ಪಾಲ್ಸ್ ಕಾನ್ವೆಂಟ್ ಹತ್ತಿರದ ನಿವಾಸಿ ವಿದ್ಯಾ ಪೈ (66) ಇವರು ದಿನಾಂಕ 12.04.2024ರ ಶುಕ್ರವಾರ ರಾತ್ರಿ 8 ಗಂಟೆಗೆ ನಿಧನರಾದರು. ತರಳಬಾಳು ಶಾಲೆಯಲ್ಲಿ ನರ್ಸರಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಮೃತರು, ಅಪಾರ ಬಂಧುಗಳನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆ ದಿನಾಂಕ 13.04.2024ರ ಶನಿವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಪಿ.ಬಿ. ರಸ್ತೆಯಲ್ಲಿನ ವೈಕುಂಠ ಶಾಂತಿಧಾಮದಲ್ಲಿ ನೆರವೇರಲಿದೆ.

Continued from 1st page





Continued to 6th page

# ಡಾ. ಸ್ಯಾಮುಯಲ್ ಹಾನಿಮನ್ ಹೋಮಿಯೋಪತಿ ವೈದ್ಯಕೀಯ ಪದ್ಧತಿಯ ಪಿತಾಮಹ

ಸರಿಸುಮಾರು 230 ವರ್ಷಗಳಿಗಿಂತಲೂ ಹೆಚ್ಚು ಕಾಲದ ಇತಿಹಾಸವಿರುವ ಹೋಮಿಯೋಪಥಿ ವೈದ್ಯಕೀಯ ಪದ್ಧತಿ, ಜರ್ಮನಿ ಮೂಲದ ಒಬ್ಬ ಅತ್ಯಂತ ಮೇಧಾವಿ ಹಾಗೂ ರೋಗಿಗಳ ಬಗೆಗಿನ ಅಪಾರ ಕಾಳಜಿ ಹೊಂದಿದ್ದ ಡಾ. ಸ್ಯಾಮುಯಲ್ ಹಾನಿಮನ್‌ರ ಸತತ ಸಂಶೋಧನೆ ಹಾಗೂ ಅವಿರತ ಪರಿಶ್ರಮಗಳ ಫಲವೇ ಇದು ಎಂದರೆ ಉತ್ಪ್ರೇಕ್ಷೆಯೇನಲ್ಲ.

1755 ಏಪ್ರಿಲ್ 10 ರಂದು ಜರ್ಮನ್ನ ಮೆಯಿಸನ್ ಎನ್ನುವ ಊರಿನಲ್ಲಿ ಗೋಟಿಫ್ರಿಎಡ್ ಬಡ ದಂಪತಿ ಮಗನಾಗಿ ಜನಿಸಿದ ಹಾನಿಮನ್ ರಿಗೆ ವಿದ್ಯಾರ್ಥಿ ದೆಸೆಯಿಂದಲೂ ಅತ್ಯಂತ ಮೇಧಾವಿಯಾಗಿದ್ದರು. ಅಲೋಪಥಿ ವೈದ್ಯಕೀಯ ವೃತ್ತಿಯನ್ನು 21ನೇ ವಯಸ್ಸಿನಲ್ಲಿಯೇ ಮುಗಿಸಿದ್ದರು. ರಾಸಾಯನಿಕ ಶಾಸ್ತ್ರ, ವೈದ್ಯಕೀಯ ಶಾಸ್ತ್ರ ಅತ್ಯಂತ ಆಳವಾಗಿ ಅಭ್ಯಸಿಸಿದ್ದರು. ಅಲ್ಲದೇ, ಸುಮಾರು 12 ಭಾಷೆಗಳ ಪಾಂಡಿತ್ಯವೂ ಇವರಿಗಿದ್ದಿದು ವಿಶೇಷ. ವೈದ್ಯನಾಗಿ ತಾನು ನಿಜವಾಗಲೂ ಆಗ ಬಳಕೆಯಲ್ಲಿರುವ ಪದ್ಧತಿಯಿಂದ ಏನೂ ಮಾಡಲು ಸಾಧ್ಯವಾಗುತ್ತಿಲ್ಲ ಎಂಬ ಪಾಪ ಪ್ರಜ್ಞೆ ಅವರನ್ನು ಕಾಡಿತ್ತು. ಆದ್ದರಿಂದ ವೈದ್ಯ ವೃತ್ತಿಯನ್ನು ತೊರೆದು ತಮ್ಮಲ್ಲಿರುವ ಭಾಷಾ ಜ್ಞಾನದಿಂದ ದೊಡ್ಡ ದೊಡ್ಡ ವೈದ್ಯಕೀಯ ಹಾಗೂ ಇತರ ಇಂಗ್ಲಿಷ್ ಗ್ರಂಥಗಳನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡುವ ಕೆಲಸಕ್ಕೆ ಕೈ ಹಾಕಿದರು.

ಇಂತಹ ಕೆಲಸದಲ್ಲಿ ತೊಡಗಿರುವಾಗಲೇ cullen's materia medica ಅನ್ನುವ ಗ್ರಂಥದಲ್ಲಿ ದೊರೆತ ಮಾಹಿತಿಯಂತೆ' ಯಾವ ವಸ್ತುವು ಆರೋಗ್ಯವಂತ ಮನುಷ್ಯನಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಸೇವಿಸಿದಾಗ ಯಾವ ಗುಣ ಲಕ್ಷಣಗಳನ್ನು ಉತ್ಪತ್ತಿ ಮಾಡುವುದೋ ಅದೇ ವಸ್ತುವನ್ನು ಅತ್ಯಂತ ಸಣ್ಣ ಪ್ರಮಾಣದಲ್ಲಿ ಇದೇ ಗುಣ ಲಕ್ಷಣವಿರುವ ಕಾಯಿಲೆಗಳಿಗೆ ಔಷಧಿ ರೂಪ ದಲ್ಲಿ ರೋಗಿಗೆ ನೀಡಿದಲ್ಲಿ ಇದು ಆ ರೋಗಿಯನ್ನು ಸಂಪೂರ್ಣವಾಗಿ ಗುಣ ಪಡಿಸುವುದು ಎಂಬ ಸಿದ್ಧಾಂತ ಅರಿತು ಕೊಂಡರು. ಈ ಸಿದ್ಧಾಂತವನ್ನು 'ಸೀಮಿಲಿಯ ಸೀಮಿಲಿಬಿಸ್ ಕ್ಯೂರೆಂತರ್' ಎಂದು ಕರೆಯುತ್ತಾರೆ. ಈ ಸಿದ್ಧಾಂತದ ಮೇಲೆ ಸತತ ಪ್ರಯೋಗಗಳು, ಆಳವಾದ ಅಧ್ಯಯನ ಹಾಗೂ ಗಹನ ಚಿಂತನೆಯನ್ನು ನಡೆಸಿ 7 ದೃಢ ಹಾಗೂ ಚಿರ ಸಿದ್ಧಾತಗಳನ್ನು ರೂಪಿಸಿ ಹೊಸ ವೈದ್ಯಕೀಯ ಪದ್ಧತಿ ಹೋಮಿಯೋಪತಿಗೆ 1796 ರಲ್ಲಿ ನಾಂದಿ ಹಾಡಿದರು. ಈ ಸಿದ್ಧಾಂತಗಳೂ ಈಗಲೂ ಬಳಕೆಯಲ್ಲಿವೆ. (7 cardinal principles) ಈ ಸಿದ್ಧಾಂತ ವನ್ನು ತಳಹದಿಯನ್ನಾಗಿ ಇಟ್ಟುಕೊಂಡು ರೋಗಿಗಳ ಚಿಕಿತ್ಸೆ ಆರಂಭ ಮಾಡಿದರು. ಇದಕ್ಕೆ ಪೂರಕವಾದ ಪ್ರಬಂಧಗಳನ್ನು ಮಂಡಿಸಿದರು.



## ಹಾನಿಮನ್‌ರ 269 ನೇ ಜನ್ಮ ದಿನಾಚರಣೆ ಪ್ರಯುಕ್ತ ನಾಳೆ ರಾಷ್ಟ್ರಮಟ್ಟದ ವೈದ್ಯಕೀಯ ವಿಚಾರ ಸಂಕಿರಣ

ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಆಗಿನ ಕಾಲದಲ್ಲಿ ಪ್ರಚಲಿತವಿದ್ದ ಅಲೋಪತಿ ವೈದ್ಯಕೀಯ ಪದ್ಧತಿಯ ಔಷಧ ಕಂಪನಿಗಳು, ವೈದ್ಯರುಗಳಿಂದ ಅತ್ಯಂತ ತೀವ್ರ ವಿರೋಧ ವ್ಯಕ್ತ ವಾದರೂ, ಇಂಗ್ಲೆಂಡ್ ಫ್ರಾನ್ಸ್ ಹಾಗೂ ಜರ್ಮನ್ ಹೀಗೆ ಬೇರೆ ಬೇರೆ ರಾಷ್ಟ್ರಗಳ, ಸತ್ಯ ಮಾರ್ಗದಲ್ಲಿ ನಡೆದು ನಿಜವಾಗಿಯೂ ರೋಗಿಗಳ ಬಗ್ಗೆ ಕಳಕಳಿ ಹಾಗೂ ರೋಗಿಯ ನೊಂದ ಜೀವಕ್ಕೆ ಶಾಶ್ವತ ಪರಿಹಾರ ನೀಡಲೇ ಬೇಕೆಂದಿದ್ದ ವೈದ್ಯರುಗಳ ಬೆಂಬಲದಿಂದ ಹಾನಿಮನ್ ಪ್ರಾರಂಭಿಸಿದ ಈ ಹೋಮಿಯೋಪಥಿ ಪದ್ಧತಿ ಇವತ್ತಿನವರೆಗೂ ಜೀವಂತ ವಾಗಿದೆ. ಕೋಟ್ಯಂತರ ಜನರ ಮನೆ ಮನಗಳಲ್ಲಿ ನೆಲೆಸಿ ಅವರ ಆರೋಗ್ಯ ಕಾಯುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗಲಾರದು.

ಹಾನಿಮನ್ ರ 269 ನೇ ಜನ್ಮದಿನ ಏಪ್ರಿಲ್ 10 ವಿಶ್ವದೆಲ್ಲೆಡೆ ಆಚರಿಸಲ್ಪಡುತ್ತಿದೆ. ಇಂದಿನ ಪ್ರಸ್ತುತ ವೈದ್ಯಕೀಯ ಜಗತ್ತಿನಲ್ಲಿ, ದಿನ ದಿನ ಹೊಸ ಹೊಸ ಕಾಯಿಲೆಗಳು ಉಗಮ ವಾಗುತ್ತಿರುವ ಈ ಕಾಲದಲ್ಲಿ, ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕ ವಲ್ಲದ (communicabe and non communicabe diseases) ಪತ್ತೆ ಹಚ್ಚಿ ಹೊಸ ಖಾಯಿಲೆ ನಾಮಕರಣವಾದರೂ ಸರಿಯಾದ ಚಿಕಿತ್ಸೆ ನೀಡುವಲ್ಲಿ, ಕೊನೆಗೂ ಔಷಧಿಗಳು ಸಂಶೋಧನೆಯಾಗದೆ, ಆಧುನಿಕ ವೈದ್ಯಕೀಯ ಪದ್ಧತಿಯು ಕೆಲವೊಮ್ಮೆ ಹಿಂದೆ ಸರಿದಾಗ, ಚಿಹ್ನೆಗಳ ಆಧಾರದ ಮೇಲೆ ನೀಡಲ್ಪಡುವ ಹೋಮಿಯೋಪಥಿ ಔಷಧಿ ಚಿಕಿತ್ಸೆ ಎಷ್ಟೊಂದು ಬಾರಿ ಸಂಜೀವಿನಿಯಂತೆ ಜನ ಸಮೂಹದ ಜೀವ ಹಾಗೂ ಜೀವನ ಉಳಿಸಿದ ಉದಾಹರಣೆಗಳನ್ನು ಜನರ ಬಾಯಲ್ಲಿ ಕೇಳಿದಾಗ ಈ ವೈದ್ಯಕೀಯ ವೃತ್ತಿಗೆ ಒಂದು ಸಾರ್ಥಕತೆಯ ಮೆರಗು ನೀಡಿದೆ ಎಂದರೆ ಅತಿಶಯೋಕ್ತಿಯಲ್ಲ.

ಒಟ್ಟಾರೆ 'dare to be wise' ಅನ್ನುವ ಮಹಾಮಂತ್ರ ಅಂದರೆ 'ನಿನ್ನ ಜಾಣತನ ವನ್ನು ತೋರಿಸಲು ಎಂದೂ ಹಿಂಜರಿಯಬೇಡ, ನಿನ್ನ ಮನಸ್ಸಿಗೆ ಹಾಗೂ ಹೃದಯಕ್ಕೆ ಒಪ್ಪದ ಕೆಲಸವನ್ನು ಎಂದಿಗೂ ಮಾಡಬೇಡ ಎಂಬುವುದು ಹೋಮಿಯೋಪಥಿ ವೈದ್ಯರುಗಳಿಗೆ ಡಾಕ್ಟರ್ ಹಾನಿಮನ್ ಬಿಟ್ಟು ಹೋದ ಒಂದು ದಿವ್ಯ ಸಂದೇಶವಾಗಿದೆ. ಯಾವ ಕಾಲಕ್ಕೂ ಬದಲಾಗದ ತತ್ವ ಸಿದ್ಧಾಂತವನ್ನು ಹೊಂದಿರುವ ಈ ವೈದ್ಯಕೀಯ ಪದ್ಧತಿ ಜನರ ಜೀವನದಲ್ಲಿ ಅಜರಾಮರವಾಗಲಿ ಎಂದು ಹಾರೈಸೋಣ.

ಹಾನಿಮನ್‌ರ ಜನ್ಮ ದಿನ ಆಚರಣೆಯನ್ನು ದಾವಣಗೆರೆ ಜಿಲ್ಲೆಯ ಹೋಮಿಯೋಪತಿ ವೈದ್ಯಕೀಯ ಸಂಘ ದಿನಾಂಕ ಏ. 14 2024 ರಂದು ರಾಷ್ಟ್ರ ಮಟ್ಟದ ವೈದ್ಯಕೀಯ ವಿಚಾರ ಸಂಕೀರಣ ಮಾಡುವ ಮೂಲಕ ವಿಶಿಷ್ಟವಾಗಿ ಆಚರಿಸಿ ಕೊಳ್ಳುತ್ತಿದೆ. ಈ ವಿಚಾರಣಾ ಸಂಕಿರಣದಲ್ಲ ಸರಕಾರಿ ಹೋಮಿಯೋಪತಿ ವೈದ್ಯಕೀಯ ಮಹಾ ವೈದ್ಯಾಲಯ ಬೆಂಗಳೂರಿನಲ್ಲಿ ಪ್ರಾಧ್ಯಾಪಕ ರಾಗಿರುವ ಡಾ. ವಿಜಯ ಕೃಷ್ಣ ವಿ. ಇವರು ತಮ್ಮ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಲಿದ್ದಾರೆ. ರಾಷ್ಟ್ರದ ವಿವಿಧ ರಾಜ್ಯಗಳಿಂದ ಹೋಮಿಯೋಪತಿ ವೈದ್ಯರುಗಳು, ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಒಟ್ಟಾರೆ ಹೋಮಿಯೋಪಥಿ ವೈದ್ಯಕಿಯ ಪಿತಾಮಹರ ಜನ್ಮ ದಿನಾಚರಣೆಯ ಪ್ರಯುಕ್ತ ಆಚರಿಸಲ್ಪಡುತ್ತಿರುವ ಈ ಕಾರ್ಯಕ್ರಮ ಯಶಸ್ವಿಯಾಗಲೆಂದು ಈ ಮೂಲಕ ಹಾರೈಸೋಣ

**-ಡಾ. ಆರತಿ ಸುಂದರೇಶ್,**
ಹೋಮಿಯೋಪತಿ ವೈದ್ಯರು, ಸುರಭಿ ಹೋಮಿಯೋಪತಿಕ್ ಹೀಲಿಂಗ್ ಸೆಂಟರ್, ದಾವಣಗೆರೆ.

## ಮಲೇಬೆನ್ನೂರು ಸುತ್ತಮುತ್ತ ತಂಪೆರೆದ ಮಳೆ ಹೊಸವರ್ಷದ ಮೊದಲ ಮಳೆಗೆ ಜನ ಹರ್ಷ



ಮಲೇಬೆನ್ನೂರು, ಏ.12- ಬಿಸಿಲಿನ ಧಗೆಯಿಂದ ತತ್ತರಿಸಿದ್ದ ಜನರಿಗೆ ಮತ್ತು ಭೂಮಿಗೆ, ಮರ-ಗಿಡಗಳಿಗೆ, ಪ್ರಾಣಿ-ಪಕ್ಷಿಗಳಿಗೆ ಶುಕ್ರವಾರ ಸಂಜೆ ಗಾಳಿ-ಗುಡುಗಿನಿಂದ ಬಂದ ಹೊಸವರ್ಷದ ಮೊದಲ ಮಳೆ ಜೀವಕಳೆ ತಂದಿತು.

ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಂಜೆ 6 ರಿಂದ 6.45 ರವರೆಗೆ ಸಾಧಾರಣವಾಗಿ ಬಂದ ಮಳೆ ಜನರಿಗೆ ಹಾಗೂ ಭೂಮಿಗೆ ತಂಪೆರೆದಿದ್ದು, ಮಳೆ ಬಂದು ನಿಂತ ನಂತರ ಕೂಲ್ ಆಗಿತ್ತು.

ಕಳೆದ ಒಂದು ವಾರದಿಂದ ಬಿಸಿಲಿನ ತಾಪಮಾನ ಹೆಚ್ಚಾಗಿದ್ದ ಕಾರಣ ಜನರು ಮಳೆಗಾಗಿ ಮುಗಿಲು ನೋಡುತ್ತಿದ್ದರು. ವರುಣನ ಕೃಪೆಗಾಗಿ ದೇವರಲ್ಲಿ ಪ್ರಾರ್ಥಿಸುತ್ತಿದ್ದರು.

ಸಂಜೆ ಬಂದ ಮಳೆಯಿಂದಾಗಿ ಜನಸ್ವಲ್ಪ ಮಟ್ಟಿಗೆ ಸಮಾಧಾನಗೊಂಡಿದ್ದು, ಮಳೆ ಬಂದ ಖುಷಿಯನ್ನು ಬಹಳಷ್ಟು ಜನ ತಮ್ಮ ಮೊಬೈಲ್ ಸ್ಟೇಟಸ್‌ನಲ್ಲಿ 'ಮುಂಗಾರು ಮಳೆಯೇ ಏನು ನಿನ್ನ ಹನಿಗಳ ಲೀಲೆ' ಎಂಬ ಹಾಡಿನೊಂದಿಗೆ ತಮ್ಮ ಊರುಗಳಲ್ಲಿ ಬಂದು ಮಳೆಯನ್ನು ವಿಡಿಯೋ ಮಾಡಿ ಹಾಕಿಕೊಂಡಿದ್ದರು.

2-3 ಬಾರಿ ಹದ ಮಳೆ ಸುರಿದಂತೆ ಭೂಮಿ ತಂಪಾಗಿ ಜನ - ಜಾನುವಾರುಗಳು - ಗಿಡ - ಮರಗಳಿಗೆ ಜೀವಕಳೆ ಹೆಚ್ಚಾಗಲಿದೆ ಎಂಬುದು ರೈತರ ಆಶಯವಾಗಿದೆ.

## ನಾಳೆ ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ



ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನಾಳೆ ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ಕೈಗೊಳ್ಳುವರು.

ನಾಳೆ ಬೆಳಗ್ಗೆ 9.30 ರಿಂದ ಕೊಂಡಜ್ಜಿ ಗ್ರಾಮದ ಮೂಲಕ ಪ್ರಚಾರ ಕಾರ್ಯ ಆರಂಭಿಸುವ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ವಿಧಾನಸಭಾ ಕ್ಷೇತ್ರದ ಸುಮಾರು 25ಕ್ಕೂ ಹೆಚ್ಚು ಗ್ರಾಮಗಳಲ್ಲಿ ರಾತ್ರಿ 9.30 ರವರೆಗೆ ಪ್ರಚಾರ ನಡೆಸುವರು.

## ಇಂದು ಆದ್ಯ ವಚನಕಾರ ದಾಸೀಮಯ್ಯ ಜಯಂತಿ

# ಕಾಯಕವನ್ನೇ ಕೈಲಾಸವಾಗಿಸಿಕೊಂಡ ಸಂತ

***'ಮೊಲೆ ಮೂಡಿ ಬಂದರೆ ಹೆಣ್ಣೆಂಬರು***
***ಗಡ್ಡ ಮೀಸೆ ಬಂದರೆ ಗಂಡೆಂಬರು***
***ನಡುವೆ ಸುಳಿಯುವಾತ್ಮನು***
***ಹೆಣ್ಣೂ ಅಲ್ಲ, ಗಂಡೂ ಅಲ್ಲ ರಾಮನಾಥ'***

ಹೆಣ್ಣು ಗಂಡಿನ ನಡುವಿನ ಅಸಮಾನತೆಯನ್ನು ಹೋಗಲಾಡಿಸಲು ಬಸವ ಯುಗದ ಪೂರ್ವದಲ್ಲಿಯೇ ಪ್ರಯತ್ನಿಸಿದ ನೇಕಾರ ಸಂತ, ಶರಣ ಪರಂಪರೆಯ ಮೊದಲಿಗ, ಆದ್ಯ ವಚನಕಾರ ದೇವರ ದಾಸೀಮಯ್ಯ. ತನ್ನ ಸತಿ ಶರಣೆ ದುಗ್ಗಳೆಯೊಂದಿಗೆ ಕಾಯಕವನ್ನೇ ಕೈಲಾಸವಾಗಿಸಿಕೊಂಡ ಸಾಧಕ.

10 ನೇ ಶತಮಾನದಲ್ಲಿ ಈಗಿನ ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ಮುದನೂರು ಗ್ರಾಮದ ನೇಕಾರ ಸಮುದಾಯದ ದೇವಾಂಗ ಕುಲದ ರಾಮಯ್ಯ- ಶಂಕರಿ ದಂಪತಿಯ ಪುತ್ರನಾಗಿ ಚೈತ್ರ ಶುದ್ಧ ಪಂಚಮಿಯಂದು ಜನಿಸುತ್ತಾರೆ. ಶೈವ ಕೇಂದ್ರ ಶ್ರೀ ಶೈಲದ ಶ್ರೀ ಚಂದ್ರಗುಂಡ ಶಿವಾಚಾರ್ಯರ ಗುರುಕುಲದಲ್ಲಿ ವಿದ್ಯೆಯ ಜೊತೆ ಸಂಸ್ಕಾರ ಪಡೆದು ಜ್ಞಾನವಂತರಾದ ಇವರು, ಪ್ರಶ್ನಿಸದೇ ಯಾವುದನ್ನು ಸ್ವೀಕರಿಸುವ ಮನೋಭಾವದವರಲ್ಲ. ಪ್ರಖರ ವೈಚಾರಿಕ ನೆಲೆಗಟ್ಟಿನ ವ್ಯಕ್ತಿತ್ವ ಹೊಂದಿದವರು.

***'ಸತಿಪತಿಗಳೊಂದಾದ ಭಕ್ತಿ***
***ಹಿತವಾಗಿಪ್ಪುದು ಶಿವಂಗೆ***



***ಸತಿಪತಿಗಳೊಂದಾಗದವನ ಭಕ್ತಿ***
***ಅಮೃತದೊಳು ವಿಷ ಬೆರೆದಂತೆ ಕಾಣಾ!***
***ರಾಮನಾಥ'***

ವಿಶಿಷ್ಟ ಕಟ್ಟಳೆಯನ್ನು ಸ್ವೀಕರಿಸಿ, ಅದನ್ನು ಸಾಧಿಸಿದ ಸಾಧ್ವಿಮಣಿ ಶಿವಪುರದ ದುಗ್ಗಲೆಯನ್ನು ವರಿಸಿದ ದಾಸೀಮಯ್ಯ ಅವರು ಮಡದಿಯನ್ನ ಕುರಿತು ಈ ರೀತಿಯ ವಚನ ರಚಿಸುತ್ತಾರೆ.

***'ಬಂದುದನರಿದು ಬಳಸುವಳು***
***ಬಂದುದ ಪರಿಣಾಮಿಸುವಳು***
***ಬಂಧು ಬಳಗವ ಮರೆಸುವಳು***
***ದುಗ್ಗಳೆಯ ತಂದು ಬದುಕಿದೆನು***
***ಕಾಣಾ ರಾಮನಾಥ'***

ಅರಮನೆಯ ಹಂಗಿನಂಗಳದಲ್ಲಿದ್ದ ಸಾಹಿತ್ಯ ಗಂಗೆಯನ್ನು ಶ್ರೀ ಸಾಮಾನ್ಯನ ಮನೆಯಂಗಳಕ್ಕೆ ಹರಿಸಿ ತಂದವರು ದೇವರ ದಾಸೀಮಯ್ಯ. ಇವರ ವಚನಗಳಿಂದ ಅಂದಿನ ಸಾಮಾಜಿಕ ವ್ಯವಸ್ಥೆ, ಪರಿಸರ, ಧಾರ್ಮಿಕ ನೆಲೆಗಟ್ಟು ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಅರಿಯಬಹುದು. ಅದ್ಭುತವಾದ ವಸ್ತ್ರವನ್ನು ನೇಯ್ದು ಶಿವನಿಗರ್ಪಿಸಿ ತವನಿಧಿಯನ್ನು ಪಡೆದು ದಾಸೋಹಿ ಗಳಾದವರು.

**ಶ್ರೀ ಶೈಲ ಜಗದ್ಗುರುಗಳು..**

ದೇವರ ದಾಸೀಮಯ್ಯ ಅವರು ಇಂಜಿನಿಯರ್ ಇದ್ದಂತೆ. ಅವರು ವಚನಗಳಿಗೆ ಗಟ್ಟಿಮುಟ್ಟಾದ ಅಡಿಗಲ್ಲು ಹಾಕಿದರು. ಅವರಾಕಿದ ಬುನಾದಿ ಮೇಲೆ ಬಸವಣ್ಣ ಸುಂದರವಾದ ಕಟ್ಟಡ ನಿರ್ಮಿಸಿದರು ಎಂದು ಶ್ರೀ ಶೈಲ ಜಗದ್ಗುರು ಡಾ. ಶ್ರೀ ಚನ್ನಸಿದ್ದರಾಮ ಶಿವಾಚಾರ್ಯರು ಪ್ರತಿಪಾದಿಸುತ್ತಾರೆ.

**ಮಹಾದೇವ ಬಣಕಾರ :** ತರಳಬಾಳು ಪೀಠದ ಸಂಸ್ಥಾಪಕ ವಿಶ್ವಬಂಧು ಮರುಳಸಿದ್ದರು ದೇವರ ದಾಸೀಮಯ್ಯ ಜೊತೆಗೆ ಕೆಲಕಾಲ ತಂಗಿ ಲಿಂಗ ತತ್ವ ಹಾಗೂ ಶರಣ ಮಾರ್ಗದ ಭಕ್ತಿ ಪಥದ ಬಗ್ಗೆ ಚರ್ಚಿಸಿದ್ದನ್ನು ಸಾಹಿತಿ ಮಹದೇವ ಬಣಕಾರ ಅವರು ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಮರುಳಸಿದ್ದ ಕಾವ್ಯದಲ್ಲಿ ದಾಖಲಿಸಿದ್ದಾರೆ.

**- ಮನೋಹರ ಮಲ್ಲಾಡದ**
**ರಾಣೇಬೆನ್ನೂರು**

## ನಾಳೆಯಿಂದ ಹರಿಹರ ತಾ.ನಲ್ಲಿ ಬಿಜೆಪಿ - ಜೆಡಿಎಸ್ ಜಂಟಿ ಪ್ರಚಾರ





ಮಲೇಬೆನ್ನೂರು, ಏ.12- ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ಹರಿಹರ ತಾಲ್ಲೂಕಿನಲ್ಲಿ ನಾಳೆ ದಿನಾಂಕ 14 ರಿಂದ 18 ರವರೆಗೆ ಬಿಜೆಪಿ - ಜೆಡಿಎಸ್ ನಾಯಕರು ಜಂಟಿ ಪ್ರಚಾರ ನಡೆಸಲಿದ್ದಾರೆ.

ದಿನಾಂಕ 14ರ ಭಾನುವಾರ ಬೆಳಿಗ್ಗೆ 9 ಗಂಟೆಗೆ ಉಕ್ಕಡಗಾತ್ರಿಯಿಂದ ಪ್ರಾರಂಭವಾಗುವ ಜಂಟಿ ಪ್ರಚಾರವು ನಂತರ ನಂದಿಗುಡಿ, ವಾಸನ, ನಂದೀಶ್ವರ ಕ್ಯಾಂಪ್, ಕೆ.ಎನ್.ಹಳ್ಳಿ, ಕೊಕ್ಕನೂರು, ಹಿಂಡಸಘಟ್ಟ, ಗೋವಿನಹಾಳ್, ಮೂಗಿನಗೊಂದಿ, ಜಿ.ಟಿ.ಕಟ್ಟಿ, ಕಂಭತ್ತನಹಳ್ಳಿ, ಹಳ್ಳಿಹಾಳ್, ಜಿ.ಬೇವಿನಹಳ್ಳಿ, ವ.ಬಸಾಪುರ, ಜಿಗಳಿ, ಯಲವಟ್ಟಿ, ಲಕ್ಕಶೆಟ್ಟಿಹಳ್ಳಿ, ಕಮಲಾಪುರ, ಭಾನುವಳ್ಳಿ, ರಾಮತೀರ್ಥ ಮತ್ತು ನಾಗೇನಹಳ್ಳಿ ಗ್ರಾಮಗಳಲ್ಲಿ ನಡೆಯಲಿದೆ.

ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಅಜಿತ್ ಸಾವಂತ್, ತಾ. ಜೆಡಿಎಸ್ ಅಧ್ಯಕ್ಷರಾದ ಹಳ್ಳಿಹಾಳ್ ಪರಮೇಶ್ವರಪ್ಪ, ಪ್ರೇಮ್‌ಕುಮಾರ್ ಅವರು ಜಂಟಿ ಪ್ರಚಾರ ತಂಡದಲ್ಲಿ ಭಾಗವಹಿಸಲಿದ್ದಾರೆ.

ದಿನಾಂಕ 15, 16, 17 ರಂದು ಕೊಂಡಜ್ಜಿ, ಬೆಳ್ಳೂಡಿ, ಭಾನುವಳ್ಳಿ ಜಿ.ಪಂ. ಕ್ಷೇತ್ರಗಳಲ್ಲಿ ಮತ್ತು ಮಲೇಬೆನ್ನೂರು ಪಟ್ಟಣದಲ್ಲಿ ಹಾಗೂ 18 ರಂದು ಹರಿಹರ ನಗರದಲ್ಲಿ ಪ್ರಚಾರ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬ್ಯಾಡ್ಮಿಂಟನ್ ತರಬೇತಿ

ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ಇವರ ಸಹಯೋಗದಲ್ಲಿ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ನೇತಾಜಿ ಸುಭಾಷ್‌ಚಂದ್ರ ಭೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಇಂದಿನಿಂದ ಇದೇ ದಿನಾಂಕ 31ರ ವರೆಗೆ ಉಚಿತ ಬ್ಯಾಡ್ಮಿಂಟನ್ ತರಬೇತಿ ಶಿಬಿರ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 9844107722, 9986222140.

## ಪಕ್ಷೇತರ ಅಭ್ಯರ್ಥಿಯಾಗಿ ಈಶ್ವರಪ್ಪ ನಾಮಪತ್ರ



ಶಿವಮೊಗ್ಗ, ಏ. 12 – ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರು ಶಿವಮೊಗ್ಗ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಆ ಮೂಲಕ ಬಿಜೆಪಿಯ ಅಭ್ಯರ್ಥಿ ಬಿ.ವೈ. ರಾಘವೇಂದ್ರ ವಿರುದ್ಧ ಸೆಣಸಾಟಕ್ಕೆ ಮುಂದಾಗಿದ್ದಾರೆ. ಬಿಜೆಪಿ ಹಿರಿಯ ನಾಯಕ ಈಶ್ವರಪ್ಪ ಅವರು ಪಕ್ಷದ ವರಿಷ್ಠರ ಮನವೊಲಿಕೆಗೆ ಕಿವಿಗೊಡದೇ ಚುನಾವಣಾ ಕಣಕ್ಕೆ ಧುಮುಕಿದ್ದಾರೆ.

## ನಗರದಲ್ಲಿ ಇಂದು 'ಶಿಕ್ಷಣದಲ್ಲಿ ರಂಗ ಕಲೆ' ಕಾರ್ಯಾಗಾರ

ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ 'ಶಿಕ್ಷಣದಲ್ಲಿ ರಂಗ ಕಲೆ' ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಮಹಾವಿದ್ಯಾಲಯದ ಆಡಳಿತಾಧಿಕಾರಿ ಪ್ರೊ. ವೈ. ವೃಷಭೇಂದ್ರಪ್ಪ ಕಾರ್ಯಾಗಾರ ಉದ್ಘಾಟಿಸಲಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ಮಾಳೂರಿನ ಉಪನ್ಯಾಸಕ ಡಾ. ಸಾಸ್ವೆಹಳ್ಳಿ ಸತೀಶ್ ಆಗಮಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸೋಮಿನಕೊಪ್ಪ ಸಹ ಶಿಕ್ಷಕ ಅಣ್ಣಪ್ಪ ಒಂಟಿಮಾಳಗಿ, ಬಿಇಎ ಶಿಕ್ಷಣ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ. ಮುರುಗೇಶಿ ಭಾಗವಹಿಸಲಿದ್ದು, ಪ್ರಾಚಾರ್ಯರಾದ ಡಾ.ಎ.ಜೆ. ನೀತಾ ಅಧ್ಯಕ್ಷತೆ ವಹಿಸಲಿದ್ದಾರೆ.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಬೆನಕಯ್ಯ ಇವರ ಜ್ಞಾಪಕಾರ್ಥವಾಗಿ ಕುಟುಂಬ ವರ್ಗದವರ ಸೇವಾರ್ಥ
ಕಲ್ಯಾಣ ಬಸವೇಶ್ವರ ಟ್ರೇಡರ್ಸ್, ದಾವಣಗೆರೆ.
ಸ್ಥಳ : ಮಹಾನಗರ ಪಾಲಿಕೆ ಆವರಣ

ತಕ್ಷಣ ಬೇಕಾಗಿದ್ದಾರೆ
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು ಬೇಕಾಗಿದ್ದಾರೆ.
ಮೊ. 97385-23711

ಸೈಟುಗಳು ಮಾರಾಟಕ್ಕಿವೆ
30x40 East ಓಲ್ಡ್ ಬನಶಂಕರಿ ಲೇಔಟ್‌ನಲ್ಲಿ
30x40 North ಬನಶ್ರೀ ಲೇಔಟ್‌ನಲ್ಲಿ
40x40 South ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಬೇಕಾಗಿದ್ದಾರೆ
SBI LIFE INSURANCEಗೆ SSLC ಮೇಲ್ಪಟ್ಟು ಓದಿರುವ 25 ರಿಂದ 70 ವರ್ಷದ ಮಹಿಳೆಯರು/ಪುರುಷರು ಬಂಡವಾಳವಿಲ್ಲದೆ ಪಾರ್ಟ್ ಟೈಂ ಕೆಲಸ ಮಾಡಿ ತಿಂಗಳಿಗೆ 25 ಸಾವಿರ ಸಂಪಾದಿಸಬಹುದು.
78994 56591

ಸೈಟು ಮಾರಾಟಕ್ಕಿದೆ
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ
$\frac{34+44}{2} \times 72$
ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
70196-74592

ಸೈಟ್, ಮನೆ ಮಾರಾಟಕ್ಕಿವೆ
ಡಾಲರ್ಸ್ ಕಾಲೋನಿ ಮನೆ 30x50, ಪಶ್ಚಿಮ (2400 sqft), ಡಾಲರ್ಸ್ ಕಾಲೋನಿ ಸೈಟ್ 40x51 ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

WANTED RECEPTIONIST
Wanted Receptionist with good hand writing & Computer knowledge for a Clinic
94499 98213

ಸೈಟು ಮಾರಾಟಕ್ಕಿದೆ
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವಮುಖವಾಗಿ 47x60 ಅಡಿ ಅಳತೆಯ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ.ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಪ್ರಾಪರ್ಟಿ ಹಬ್
ಇ ಸಿ
ಇ – ಸ್ವತ್ತು
ಕಟ್ಟಡ ಲೈಸೆನ್ಸ್
ಖಾತೆ ಬದಲಾವಣೆ
96118 66449

ಮಳಿಗೆ ಬಾಡಿಗೆಗೆ ಇದೆ
100 ಚದುರಡಿ ಮಳಿಗೆ ಬಾಡಿಗೆಗೆ ಇದೆ, ಡಾ|| ವಿದ್ಯಾ ಸಾಗರ್ ಕ್ಲಿನಿಕ್ ಎದುರುಗಡೆ, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ. ವಿಚಾರಿಸಿ:
98805 73887, 98441 29091

ಬೇಕಾಗಿದ್ದಾರೆ
ರಿಸೆಪ್ಷನಿಸ್ಟ್, ಸ್ಟಾಫ್ ನರ್ಸ್ GNM/ ANM, ಆಯಾ, ವಾರ್ಡ್ ಬಾಯ್, ಡ್ಯೂಟಿ ಡಾಕ್ಟರ್ಸ್
82176 80171

STAFF NURSES VACANCY
1) Senior nurses (GNM) - 3, OBG & Pead exp. 2) Junior nurses (GNM) 5 Freshers prefered 3) Reception / Lab Technician-2
Mathruchaaya Health Care
Shamanur road, Dvg.
78298 08443,97427 62462

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ಸಾಯಿ ಎಗ್ ಸೆಂಟರ್ ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

ತಕ್ಷಣ ಬೇಕಾಗಿದ್ದಾರೆ
wholesale ಅಂಗಡಿಗೆ ಬಿಲ್ ಚೆಕ್ ಮಾಡಲು ಮತ್ತು ಸ್ಟಾಕ್ ಪರಿಶೀಲನೆ ಮಾಡಲು ಬೇಕಾಗಿದ್ದಾರೆ. ಕೆಲಸದ ಸಮಯ ಸಂಜೆ 5:30 ರಿಂದ 8:30 ರವರೆಗೆ ಸಂಪರ್ಕಿಸಿ:
94482 02879

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
Sales Girls needed for inner wear store women's paradise, AVK College Road, Davanagere.
96204 53208

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಬಿಲ್ಲಿಂಗ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ
ಸರ್ಕಾರಿ ನೌಕರರ ಬಡಾವಣೆ, ಬಿ ಬ್ಲಾಕ್ 30x50 2 ಸೈಟ್, ಪೂರ್ವ, 30x40 ಪೂರ್ವ, ಎಸ್.ಎಸ್. ಬಡಾವಣೆ, ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43 40 ಅಡಿ ರಸ್ತೆಗೆ ಉತ್ತರ, 30x40 ಉತ್ತರ, ಬೈಪಾಸ್ ಸರ್ವೀಸ್ ರಸ್ತೆಗೆ 30x55 (ಕಮರ್ಷಿಯಲ್) ಸೈಟ್‌ಗಳು ಮಾರಾಟಕ್ಕಿವೆ.
ಸುರೇಶ್ ಪಿ.ಎಸ್, 84314 00907

ತಕ್ಷಣ ಬೇಕಾಗಿದ್ದಾರೆ
ಮನೆಯಲ್ಲಿಯೇ ಮಕ್ಕಳಿಗೆ ಜಿಮ್ ಹೇಳಿಕೊಡಲು ಟ್ರೈನಿಂಗ್ ಆದ ಮಹಿಳೆಯರು ಬೇಕಾಗಿದ್ದಾರೆ. ಹಾಗೂ ಅಡುಗೆ ಮಾಡಲು ವೆಜ್ & ನಾನ್ ವೆಜ್ ಮಹಿಳೆ ಬೇಕಾಗಿದ್ದಾರೆ.
73535 07622

SSLC SUMMER CLASS
From April 10th to May 28th
10 AM to 5 PM Classes
SAMRUDDHI ACADEMY DAVANAGERE
81472 62361, 96202 62361

ಮಳಿಗೆ ಬಾಡಿಗೆಗೆ ಇದೆ
100 ಚದುರದ ಮಳಿಗೆ ಬಾಡಿಗೆಗೆ ಇದೆ, ಡಾ. ವಿದ್ಯಾ ಸಾಗರ್ ಕ್ಲಿನಿಕ್ ಎದುರುಗಡೆ ಎಂ.ಸಿ.ಸಿ, 'ಬಿ' ಬ್ಲಾಕ್, ದಾವಣಗೆರೆ. ವಿಚಾರಿಸಿ.
98805 73887, 98441 29091

ಬಾಡಿಗೆಗೆ ಇದೆ
3 ಬೆಡ್ ರೂಂ, 2 ಅಟ್ಯಾಚ್ ಬಾತ್ ರೂಂ ಇರುವ ವಿಶಾಲವಾದ ಪೂಜಾ ಹಾಲ್, ಅಡುಗೆ ಮನೆ ಇರುವ 24 ಗಂಟೆ ನೀರಿನ ಸೌಕರ್ಯ ಇರುವ, ವಾಸಕ್ಕೆ ಯೋಗ್ಯವಾಗಿರುವ ಮನೆ ಬಾಡಿಗೆಗೆ ಇದೆ. ವಿಳಾಸ : 1ನೇ ಮಹಡಿ (ಮೊದಲನೇ ಮಹಡಿ) #1556/57, 1ನೇ ಮೇನ್, 15ನೇ ಕ್ರಾಸ್, ವಿನೋಬ ನಗರ, ದಾವಣಗೆರೆ. ಸಂಪರ್ಕಿಸಿ.
79969 35756

ಮನೆಗಳು ಬಾಡಿಗೆಗೆ ಇವೆ
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್, 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

ಬೇಕಾಗಿದ್ದಾರೆ
"ಕಲ್ಪವೃಕ್ಷ" ಎಕ್ಸ್‌ಕ್ಲೂಸಿವ್ ಜ್ಯೂಯಲರಿ ಶೋ ರೂಂನಲ್ಲಿ ಅನುಭವವುಳ್ಳ ಸೇಲ್ಸ್ ಬಾಯ್ಸ್/ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಪರಿಚಯದೊಂದಿಗೆ ಸಂಪರ್ಕಿಸಿ :
ಮೇನ್ ರೋಡ್, ಹರಿಹರ.
8105609901, 9844359130

ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ
"ರಶ್ಮಿ" ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆ, ಕನ್ನಡ ಮಾಧ್ಯಮ ಶಾಲೆಯಲ್ಲಿ ಬೋಧನೆ ಮಾಡಲು BA., B.Ed., ಇಂಗ್ಲಿಷ್ ಮೇಜರ್ Bsc., B.Ed., ವಿದ್ಯಾರ್ಹತೆಯುಳ್ಳ ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ. ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
99163 62288

PU Failed Batches
PCMB, Commerce, Arts
100% Results
ಸಿಂಚನ ಅಕಾಡೆಮಿ, ದಾವಣಗೆರೆ.
90195 80600, 8861445913

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ 2 ವರ್ಷ. ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ/ಪಿಯುಸಿ, ಪಾಸ್/ಫೇಲ್ ಶ್ರೀ ಗಂಗೋತ್ರಿ ಹೆಲ್ತ್ ಅಲೈಡ್ ಕಾಲೇಜ್, ಗಾಂಧಿ ಸರ್ಕಲ್ ಹತ್ತಿರ, ಮೋತಿ ಸ್ವೀಟ್ಸ್/ಟ್ರೆಂಡ್ಸ್ ಪಕ್ಕ, ದಾವಣಗೆರೆ.
86602 35013

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ಬೇಕಾಗಿದ್ದಾರೆ
ಕ್ರೆಡಿಟ್ ಕೋ-ಆಪ್. ಸೊಸೈಟಿಗೆ ಮ್ಯಾನೇಜರ್ - 01 - BA, B.Com, ಅಕೌಂಟೆಂಟ್ - 01 - B.Com, ಸಹಾಯಕರು - 02 - PUC, ಪಿಗ್ಮಿ ಏಜೆಂಟರ್ - 05 - SSLC, ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ :
99802 40407

ಸೈಟ್ ಮಾರಾಟಕ್ಕಿದೆ
KHB ಲೇಔಟ್ ದಾವಣಗೆರೆಯಲ್ಲಿ 50x80 ಪಶ್ಚಿಮ ಸೈಟ್ ಓನರ್‌ಗೆ ಸಂಪರ್ಕಿಸಿ.
63621 81509

ಸೋಳ್ಳೆ ಮೆಶ್ ಹಾಕಲಾಗುವುದು
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapan Cushion Work
Behind Vital Temple
Maharaj Pet, Davanagere
98445 81966

ಬೇಕಾಗಿದ್ದಾರೆ
1) ಸ್ಟಾಫ್ ನರ್ಸ್‌ಗಳು
2) ವಾಚ್‌ಮನ್ (ಹಗಲು ಮತ್ತು ರಾತ್ರಿ ಡ್ಯೂಟಿ)
3) ಆಯಾಗಳು, ಸಂಪರ್ಕಿಸಿ :
98808 53626

ರಕ್ತ ದಾನ ಶ್ರೇಷ್ಠ ದಾನ

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಕೆಲಸಕ್ಕೆ ಬೇಕಾಗಿದ್ದಾರೆ
ಎಸ್.ಆರ್. ಕನ್‌ಸ್ಟ್ರಕ್ಷನ್ಸ್
MS Office
ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ : ಬೆ.: 10 ರಿಂದ ಸಂ. : 6 ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539, 99012 04134

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಾಕೇತ್ ಎಂಟರ್‌ಪ್ರೈಸಸ್
ಪ್ಲಾಟ್ ನಂ. 5-E ಕರೂರ್ ಇಂಡಸ್ಟ್ರೀಯಲ್ ಏರಿಯಾ, ಡಿಐಸಿ ಆಫೀಸ್ ಎದುರು, ದಾವಣಗೆರೆ-6.
87629 02569

ಶ್ರೀ ದುಗ್ಗಮ್ಮ ದೇವಿ ಪ್ರಸನ್ನ
ಟಗರು ಮಾರಾಟಕ್ಕಿದೆ
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

ಬೇಕಾಗಿದ್ದಾರೆ
ಹೋಟೆಲ್‌ನಲ್ಲಿ ದೋಸೆ ಹಾಕಲು ಭಟ್ರು ಬೇಕಾಗಿದ್ದಾರೆ.
91135 68249

ತಕ್ಷಣ ಬೇಕಾಗಿದ್ದಾರೆ
wholesale ಅಂಗಡಿಗೆ ಟ್ಯಾಲಿ ಬಿಲ್ಲಿಂಗ್ ಆಪರೇಟರ್ ಮತ್ತು ಕ್ಯಾಷಿಯರ್ ಮತ್ತು Delivery supervisor ಬೇಕಾಗಿದ್ದಾರೆ.
ಸಂಪರ್ಕಿಸಿ: 9482214855

ಮನೆ ಮಾರಾಟಕ್ಕಿದೆ
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಶನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

WANTED
PUC or Degree Pass or Fail Computer Knowledge is must. Excellent Electronics #2137/1, 4th main, 3rd cross, MCC `A' Block Davanagere - 577002. Contact :
98865 15100

WANTED
ACCOUNTANTS - 5
(3-5 years Experience in Tally)
Shamanur Pharma & Health Care Pvt. Ltd.,
374, 4th main, PJ Extensions, Davangere.
98441 20003

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

FOR SALE / JD
10,000 sqft Corner site in 4th main Vinobhanagar 1km from PB Road, 1 km from Ring road, Sale 5cr / Joint Venture. Contact :
98451 90787, 98807, 35505,
98456 98181

ಜಮೀನು ಮಾರಾಟಕ್ಕಿದೆ
9 ಲಕ್ಷ ರೂ ಎಕರೆ, 20 ರಿಂದ 100 ಎಕರೆ ಜಮೀನು ಮಾರಾಟಕ್ಕಿದೆ. ದಾವಣಗೆರೆಯಿಂದ 110 ಕಿ.ಮೀ. @ ಲಕ್ಷ್ಮೇಶ್ವರ.
(Contact only buyers)
Sharma: 63608 66997

ಮನೆ ಲೀಸ್‌ಗಿದೆ
ಡಬಲ್ ಬೆಡ್ ರೂಂ ಸುಸಜ್ಜಿತ 2ನೇ ಮಹಡಿ ಮನೆ ಶ್ರೀನಿವಾಸನಗರ 4ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಲೀಸ್ ಗಿದೆ. ಸಂಪರ್ಕಿಸಿ :
99723 42941

FURNISHED HOUSE TO LET / LEASE
For Domestic / Residential
3BHK, 1st Floor, 13th main / BIET Road, Opp : Davanagere Harihara Urban Bank Ltd. and Godown 13x26Feet To Let
98444 99799

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಶನಿವಾರ, ಏಪ್ರಿಲ್ 13, 2024

☎ 08192 254736 ✆ 91642 99999



ಕಾಂಗ್ರೆಸ್ ಪಕ್ಷದಿಂದ ಡಾ.ಪ್ರಭಾ ಮಲ್ಲಿಕಾರ್ಜುನ್, ಬಂಡಾಯ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್, ಎಸ್.ಯು.ಸಿ.ಐ. ಪಕ್ಷದಿಂದ ಕೆ.ಎ. ತಿಪ್ಪೇಸ್ವಾಮಿ, ಉತ್ತಮ ಪ್ರಜಾಕೀಯ ಪಕ್ಷದಿಂದ ಈಶ್ವರ, ಕೆ.ಆರ್.ಎಸ್. ಪಕ್ಷದಿಂದ ಜಿ.ಪಿ. ರಾಘುವೇಂದ್ರ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

# ರಾಮೇಶ್ವರಂ ಕೆಫೆ ಸ್ಫೋಟ ಶಂಕಿತರು ವಶ

ಬೆಂಗಳೂರು, ಏ. 12- ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಪ್ರಮುಖ ಶಂಕಿತ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ತಾಹಾನನ್ನು ಪಶ್ಚಿಮ ಬಂಗಾಳದಲ್ಲಿ ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ತೀರ್ಥಹಳ್ಳಿಯ ಮುಸಾವೀರ್ ಹಾಗೂ ಅಬ್ದುಲ್ ತಾಹಾ ಘಟನೆ ನಂತರ ತಲೆ ಮರೆಸಿಕೊಂಡಿದ್ದರು.

ಬಾಂಬ್ ಸ್ಫೋಟಿಸಿ ಕಲಬುರಗಿ ಮಾರ್ಗವಾಗಿ ಪಶ್ಚಿಮ ಬಂಗಾಳ ತಲುಪಿ ಅಲ್ಲೇ ನೆಲೆಸಿದ್ದರು. ಇವರನ್ನು ವಶಕ್ಕೆ ಪಡೆದ ನಂತರ ಅಧಿಕಾರಿಗಳು ಬೆಂಗಳೂರಿಗೆ ಕರೆತಂದು ಮತ್ತಷ್ಟು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಅಬ್ದುಲ್ ಮತೀನ್ ತಾಹಾ ಹಲವು ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ. ರಾಮೇಶ್ವರಂ ಬಾಂಬ್ ಪ್ರಕರಣದ ರೂವಾರಿಯೂ ಈತನೇ. ಭಯೋತ್ಪಾದನಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಈತ ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿದ್ದ. ಅಬ್ದುಲ್ ಮತೀನ್ ವಿದೇಶಗಳಿಂದ ಹಣ ತರಿಸಿಕೊಂಡು ಅದನ್ನು ವಿಧ್ವಂಸಕ ಕೃತ್ಯ



ನಡೆಸಲು, ಯುವಕರನ್ನು ಜಿಹಾದಿಗಳನ್ನಾಗಿ ತಯಾರು ಮಾಡಲು ಬಳಸುತ್ತಿದ್ದ ಎಂದು ಪ್ರಾಥಮಿಕ ವರದಿಯಿಂದ ತಿಳಿದುಬಂದಿದೆ.

ಈತ ಅಲ್ ಹಿಂದ್ ಸಂಘಟನೆಯಲ್ಲಿದ್ದಾನೆ. ತೀರ್ಥಹಳ್ಳಿ ಬಿಡುವುದಕ್ಕೂ ಮುನ್ನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು ನಂತರ ಪಾಟ್ನಾದಲ್ಲಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದ. ಅಲ್ ಹಿಂದ್ ಸಂಘಟನೆ ಸೇರಿದ ನಂತರ ಕುಕ್ಕರ್ ಬಾಂಬ್ ತಯಾರಿಕೆಯಲ್ಲಿ ನಿಪುಣನಾಗಿದ್ದ.

ಅಲ್ ಹಿಂದ್ ಸಂಘಟನೆ ಸದಸ್ಯರಿಗೆ ಅಬ್ದುಲ್ ಮತೀನ್ ತಾಹಾ ಅಡಗಲು ಸಹಾಯ ಮಾಡುತ್ತಿದ್ದ, ಈತನ ಬಗ್ಗೆ ಮಾಹಿತಿ ನೀಡಿದವರಿಗೆ 5 ಲಕ್ಷ ರೂ. ಬಹುಮಾನವನ್ನು ಎನ್‌ಐಎ ಘೋಷಿಸಿತ್ತು.

ಮಂಗಳೂರಿನಲ್ಲಿ ಈತ ನಡೆಸಿದ ಮೊದಲ ಪ್ರಯೋಗ ವಿಫಲವಾದ ನಂತರ ಬೆಂಗಳೂರಿನ ಐಟಿ ಕಾರಿಡಾರ್‌ನಲ್ಲಿ ವಿಧ್ವಂಸಕ ಕೃತ್ಯ ನಡೆಸಿ ವಿಶ್ವ ಮಟ್ಟದಲ್ಲಿ ಗಮನ ಸೆಳೆಯುವ ಪ್ರಯತ್ನ ಮಾಡಿದ್ದ.

ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿದ ನಂತರ ಈ ಇಬ್ಬರು ಅಸ್ಸಾಂ ಮಾರ್ಗವಾಗಿ ಪಶ್ಚಿಮ ಬಂಗಾಳಕ್ಕೆ ತೆರಳಿ ಕೊಲ್ಕತ್ತಾದ ಮನೆಯೊಂದರಲ್ಲಿ ವಾಸವಾಗಿದ್ದರು.

ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮತೀನ್ ತಾಹಾ ನಕಲಿ ದಾಖಲೆಗಳೊಂದಿಗೆ ತಲೆಮರೆಸಿಕೊಂಡಿದ್ದರು.

ತಮಿಳುನಾಡು, ಒಡಿಶಾ, ಅಸ್ಸಾಂ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಬಾಂಬ್ ಸ್ಫೋಟ ಆರೋಪಿಗಳಿಗಾಗಿ ಎನ್‌ಐಎ ಶೋಧನೆ ನಡೆಸಿತ್ತು. ಅಧಿಕಾರಿಗಳಿಗೆ ದೊರೆತ ಮಾಹಿತಿ ಆಧರಿಸಿ ಸ್ಥಳೀಯ ಪೊಲೀಸರ ನೆರವಿನಿಂದ ಇವರನ್ನು ಬಂಧಿಸಿ ಹೆಚ್ಚಿನ ತನಿಖೆಗೆ ಬೆಂಗಳೂರಿಗೆ ಕರೆತರಲಾಗಿದೆ.



ಮಳೆ ಬಂತು ಮಳೆ ... !

ಬಿಸಿಲಿನಿಂದ ಬಸವಳಿದಿದ್ದ ಇಳೆಗೆ ಶುಕ್ರವಾರ ಸಂಜೆ ಸುರಿದ ಮಳೆ ತಂಪೆರೆಯಿತು. ದಾವಣಗೆರೆ ನಗರದಲ್ಲಿ ಸುರಿದ ಮಳೆ ಜನರ ಮನದಲ್ಲಿ ಹರ್ಷ ಮೂಡಿಸಿತು. ಮಕ್ಕಳಂತೂ ಮಳೆಯಲ್ಲಿ ಕುಣಿದು ಕುಪ್ಪಳಿಸಿದರು. ಕೆಟಿಜೆ ನಗರದಲ್ಲಿ ಮಕ್ಕಳು ಮಳೆಯಲ್ಲಿ ನೆನೆಯುತ್ತಾ ಹರ್ಷಿಸುತ್ತಿರುವ ಚಿತ್ರವಿದು.

# ನಾಳೆ ಒಂದೇ ವೇದಿಕೆಯಲ್ಲಿ ಮೋದಿ-ದೇವೇಗೌಡ

ಬೆಂಗಳೂರು, ಏ. 12- ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರುಗಳು ಕಾಂಗ್ರೆಸ್ ವಿರುದ್ಧ ಸಮರ ಸಾರಲು ಒಂದೇ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಲು ಮೋದಿ ಅವರು ಇದೇ 14 ರಂದು ಒಂದು ದಿನದ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮೈಸೂರು ಹಾಗೂ ಮಂಗಳೂರಿನಲ್ಲಿ ಏಳು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ.

ಜೆಡಿಎಸ್, ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಗೊಂಡ ನಂತರ ಇದೇ ಮೊದಲ ಬಾರಿಗೆ ಮೋದಿ ಹಾಗೂ ಗೌಡರು ಮೈಸೂರಿನ ಮಹಾರಾಜ ಕಾಲೇಜಿನ ಆವರಣದಲ್ಲಿ ನಡೆ ಯುವ ಚುನಾವಣಾ ಪ್ರಚಾರದ ವೇದಿಕೆಯಲ್ಲಿ ಕಾಂಗ್ರೆಸ್ ವಿರುದ್ಧ ಗುಡುಗಲಿದ್ದಾರೆ.

ಅಂದು ಸಂಜೆ 4 ಗಂಟೆಗೆ ನಡೆಯುವ ಬಿಜೆಪಿ-ಜೆಡಿಎಸ್ ಮೈತ್ರಿ ಸಮಾವೇಶದಲ್ಲಿ ಮೈಸೂರು-ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಪರ ಉಭಯ ನಾಯಕರು ಮತ ಯಾಚಿಸಲಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆವರೆಗೂ ಸಿದ್ಧಾಂತದ ಆಧಾರದ ಮೇಲೆ ರಾಜಕೀಯ ಮಾಡಿಕೊಂಡು ಬಂದ ಈ ನಾಯಕರು, ಇಂದು ತಮ್ಮ ಹಳೆಯ ಎಲ್ಲಾ ರಾಜಕೀಯ ವೈಮನಸ್ಸನ್ನು ದೂರವಿಟ್ಟು ಎನ್‌ಡಿಎ ಅಭ್ಯರ್ಥಿಗಳ ಪರ ಮತ ಯಾಚಿಸುತ್ತಿದ್ದಾರೆ.

ಚುನಾವಣೆಗೆ ಸಂಬಂಧಿಸಿದಂತೆ ಈ ಇಬ್ಬರು ನಾಯಕರು ಇದೇ ಪ್ರಥಮ ಬಾರಿಗೆ ವೇದಿಕೆ ಹಂಚಿಕೊಂಡು ಕಾಂಗ್ರೆಸ್ ವಿರುದ್ಧ ರಾಜಕೀಯ ಟೀಕಾಸ್ತ್ರಗಳನ್ನು ನಡೆಸಿ ಪಕ್ಷದ ಅಭ್ಯರ್ಥಿಗಳ ಪರ ಮತ ನೀಡುವಂತೆ ಮನವಿ ಮಾಡಿಕೊಳ್ಳಲಿದ್ದಾರೆ.

ಮಹಾರಾಜ ಕಾಲೇಜಿನ ಆವರಣಲ್ಲಿ ನಡೆಯುವ ಸಮಾರಂಭ ಬಿಜೆಪಿ-ಜೆಡಿಎಸ್ ಜಂಟಿ ಸಮಾವೇಶವಾಗಿದ್ದು, ಇದರಲ್ಲಿ ಮೋದಿ ಹಾಗೂ ದೇವೇಗೌಡರಲ್ಲದೆ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿರುವರು.

ಮೈಸೂರು ಪ್ರವಾಸ ಮುಗಿಸಿ, ಪ್ರಧಾನಿ ಅವರು, ಮಂಗಳೂರಿನಲ್ಲಿ ಬೃಹತ್ ರೋಡ್ ಶೋ ನಡೆಸಿ, ಬಿಜೆಪಿ ಅಭ್ಯರ್ಥಿಗಳ ಪರ ಮತ ಯಾಚಿಸಲಿದ್ದಾರೆ.

# ಮಾಜಿ ಶಾಸಕ ಗುರುಸಿದ್ದನಗೌಡ ಕಾಂಗ್ರೆಸ್‌ಗೆ



ದಾವಣಗೆರೆ, ಏ.12- ಜಗಳೂರು ಮಾಜಿ ಶಾಸಕರು, ಹಿರಿಯ ಬಿಜೆಪಿ ಮುಖಂಡರು, ಆರ್. ಎಸ್.ಎಸ್.ಕಟ್ಟಾಳ್ ಟಿ.ಗುರುಸಿದ್ದನಗೌಡ ಅವರು ಇಂದು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಗುರುಸಿದ್ದನಗೌಡ ಅವರೊಂದಿಗೆ ಅವರ ಪುತ್ರ ಆರೈಕೆ ಆಸ್ಪತ್ರೆಯ ಡಾ|| ಟಿ.ಜಿ.ರವಿಕುಮಾರ್, ಬಿಜೆಪಿ ಮುಖಂಡರುಗಳಾದ ಟಿ.ಜಿ.ಅರ ವಿಂದ್, ಟಿ.ಜಿ.ಪ್ರವೀಣ್, ಕಕ್ಕರಗೊಳ್ಳದ ಕೆ.ಪಿ. ಕಲ್ಲಿಂಗಪ್ಪ, ನಾಗರಾಜ ಸ್ವಾಮಿ, ಮಟ್ಟಿಕಲ್ಲು ವೀರಭದ್ರಸ್ವಾಮಿ, ಗೌರಿಪುರದ ಶಿವಣ್ಣ ಮತ್ತಿತರರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಜಗಳೂರು ಶಾಸಕ ದೇವೇಂದ್ರಪ್ಪ, ಎನ್.ಜಿ.ಪುಟ್ಟಸ್ವಾಮಿ, ಶಿವನಗೌಡ, ಕಮ್ಮತ್ತಹಳ್ಳಿ ಮಂಜುನಾಥ್ , ಶ್ಯಾಗಲೆ ಜಯಣ್ಣ ಮತ್ತಿತರರು ಉಪಸ್ಥಿತರಿದ್ದರು.

ತಮ್ಮನ್ನು ಭೇಟಿ ಮಾಡಿದ ಪತ್ರ ಕರ್ತರನ್ನು ಉದ್ದೇಶಿಸಿ ಮಾತನಾಡಿದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು, ಗುರುಸಿದ್ದನಗೌಡ್ರು ಮತ್ತು ಅವರ ಬೆಂಬಲಿಗರು ಕಾಂಗ್ರೆಸ್ ಪಕ್ಷ ಸೇರಿರುವುದರಿಂದ ನಮಗೆ ಆನೆ ಬಲ ಬಂದಂತಾಗಿದೆ. ಅವರ ಮಾರ್ಗ ದರ್ಶನದಲ್ಲಿ ನಾವುಗಳು ಮುನ್ನಡೆಯುತ್ತೇವೆ ಎಂದರು.

ಆರೈಕೆ ಆಸ್ಪತ್ರೆಯ ಡಾ.ಟಿ.ಜಿ. ರವಿಕುಮಾರ್ ಮಾತನಾಡಿ, ಬಿಜೆಪಿ ಪಕ್ಷದಲ್ಲಿ ಸರ್ವಾಧಿಕಾರಿ ಧೋರಣೆ ಇರುವುದನ್ನು ನಾವು ಖಂಡಿಸುತ್ತಾ ಬಂದೆವು ಮತ್ತು ವಿದ್ಯಾವಂತರಿಗೆ ಅವಕಾಶ ನೀಡುವಂತೆ ಮನವಿ ಮಾಡಿದರೂ ಸಹ ಹೈಕಮಾಂಡ್ ನಮ್ಮ ಮನವಿಗೆ ಸ್ಪಂದಿಸದೇ ಇರುವುದು ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ ಅವರ ಏಕಸ್ವಾಮ್ಯ ಆಡಳಿತದಿಂದ ಬೇಸತ್ತು ಪಕ್ಷವನ್ನು ತೊರೆದವು ಎಂದರು.

ದಾವಣಗೆರೆ ಜಿಲ್ಲೆಗೆ ಒಬ್ಬ ಸಮರ್ಥ ಆಡಳಿತ ಗಾರರಾದ ಮಲ್ಲಿಕಾರ್ಜುನಂತವರು ದೊರೆತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದ್ದು, ಅವರ ಪತ್ನಿ ವಿದ್ಯಾವಂತ ರಿದ್ದು ಅವರು ನಮ್ಮನ್ನು ಪ್ರತಿನಿಧಿಸಿದರೆ ಕ್ಷೇತ್ರಕ್ಕೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.

# ಮೊದಲ ದಿನ ಐವರಿಂದ ನಾಮಪತ್ರ

## ಕಾಂಗ್ರೆಸ್‌ನಿಂದ ಪ್ರಭಾ ಮಲ್ಲಿಕಾರ್ಜುನ್, ಪಕ್ಷೇತರವಾಗಿ ವಿನಯ್ ಕುಮಾರ್

ದಾವಣಗೆರೆ, ಏ. 12 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಕೆ ಶುಕ್ರವಾರದಿಂದ ಆರಂಭವಾಗಿದ್ದು, ಮೊದಲ ದಿನದಂದು ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಹಾಗೂ ಪಕ್ಷೇತರವಾಗಿ ಜಿ.ಬಿ. ವಿನಯ್ ಕುಮಾರ್ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಮೊದಲ ದಿನದಂದು ಐವರು ಅಭ್ಯರ್ಥಿಗಳು 6 ನಾಮಪತ್ರ ಸಲ್ಲಿಸಿದ್ದಾರೆ. ಪ್ರಭಾ ಮಲ್ಲಿಕಾರ್ಜುನ್ ಅವರು ಎರಡು ಸೆಟ್ ನಾಮಪತ್ರ ಸಲ್ಲಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರಲ್ಲದೇ, ಎಸ್.ಯು.ಸಿ.ಐ. ಪಕ್ಷದಿಂದ ಕೆ.ಎ. ತಿಪ್ಪೇಸ್ವಾಮಿ, ಉತ್ತಮ ಪ್ರಜಾಕೀಯ ಪಕ್ಷದಿಂದ ಈಶ್ವರ, ಕೆ.ಆರ್.ಎಸ್. ಪಕ್ಷದಿಂದ ಜಿ.ಪಿ. ರಾಘು ವೇಂದ್ರ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಪಕ್ಷೇತರ ಅಭ್ಯರ್ಥಿ ವಿನಯ್‌ಕುಮಾರ್ ನಾಮಪತ್ರ ಸಲ್ಲಿಸುವ ವೇಳೆ ಶ್ರೀಮತಿ ಗೀತಾ ಮುರುಗೇಶ್, ಶರತ್‌ಕುಮಾರ್, ಸಿದ್ದಪ್ಪ, ಮಹಮ್ಮದ್ ಅಲ್ತಾಫ್ ಹುಸೇನ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಅಭ್ಯರ್ಥಿಯಾಗಿ ಪ್ರಭಾ ಅವರು ನಾಮಪತ್ರ ಸಲ್ಲಿಸುವ ವೇಳೆ ಅವರ ಪತಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಜೊತೆಗಿದ್ದರು. ಶಾಸಕರಾದ ಲತಾ ಮಲ್ಲಿಕಾರ್ಜುನ್, ಕೆ.ಎಸ್. ಬಸವಂತಪ್ಪ, ಬಿ. ದೇವೇಂದ್ರಪ್ಪ ಹಾಗೂ ಕುರುಬ ಸಮಾಜದ ಗಣೇಶ್, ವಕೀಲರಾದ ಸೈಯದ್ ಸಲೀಂ ಜೊತೆಗಿದ್ದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್, ಗ್ರಾಮ ಪಂಚಾಯತಿ ಮಟ್ಟದಿಂದ ಎಲ್ಲ ಕಡೆ ಪ್ರಚಾರ ಮಾಡಲಾಗುತ್ತಿದೆ. ಈಗಾಗಲೇ ನಾಲ್ಕು ಕ್ಷೇತ್ರಗಳಲ್ಲಿ ಪ್ರಚಾರ ಮುಗಿದಿದೆ. ದಾವಣಗೆರೆ ಲೋಕಸಭಾ ಕ್ಷೇತ್ರದ ಜನರು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ವಿನಯ್ ಕುಮಾರ್ ಸ್ಪರ್ಧೆ ಬಗ್ಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ಸ್ಪರ್ಧಿಸಲು ಎಲ್ಲರಿಗೂ ಆಸೆ ಇರುತ್ತದೆ. ಕ್ಷೇತ್ರದ ಜನರು ಆಯ್ಕೆ ಮಾಡುತ್ತಾರೆ ಎಂದರು.

ಸಚಿವ ಮಲ್ಲಿಕಾರ್ಜುನ್ ಮಾತನಾಡಿ, ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆ ಪ್ರತಿ ಮನೆಗೆ ತಲುಪಿವೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಜನರಿಗೆ ತಲುಪಿಸುವ ಕೆಲಸ ಮಾಡಲಾಗುವುದು. ಪ್ರಭಾ ಮಲ್ಲಿಕಾರ್ಜುನ್ ಅವರು ದಾವಣಗೆರೆ ಲೋಕಸಭಾ ಕ್ಷೇತ್ರದ ಪ್ರತಿಯೊಂದು ಆಗು ಹೋಗು, ಸಮಸ್ಯೆಗಳಿಗೆ ಸಂಸತ್ತಿನಲ್ಲಿ ಧ್ವನಿ ಎತ್ತಲಿದ್ದಾರೆ ಎಂದು ಹೇಳಿದರು.

(7ನೇ ಪುಟಕ್ಕೆ)

## ಪ್ರಭಾ ಮಲ್ಲಿಕಾರ್ಜುನ್ ಆಸ್ತಿ ಮೌಲ್ಯ 44.53 ಕೋಟಿ ರೂ.



ಕಾಂಗ್ರೆಸ್ ಅಭ್ಯರ್ಥಿಯಾಗಿ ಲೋಕಸಭಾ ಕಣಕ್ಕಿಳಿದಿರುವ ಪ್ರಭಾ ಮಲ್ಲಿಕಾರ್ಜುನ್ ಅವರು ಹೊಂದಿರುವ ಆಸ್ತಿಗಳ ಒಟ್ಟು ಮೌಲ್ಯ 44.43 ಕೋಟಿ ರೂ. ಆಗಿದೆ ಎಂದು ನಾಮಪತ್ರದ ವೇಳೆ ದಾಖಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಚರಾಸ್ತಿಯ ಮೌಲ್ಯ 5,92,95,564 ರೂ. ಮತ್ತು ಸ್ಥಿರಾಸ್ತಿಯ ಮೌಲ್ಯ 38,60,18,722 ಕೋಟಿ ರೂ. ಆಗಿದೆ.

ಅವರು 1.54 ಕೋಟಿ ರೂ. ಮೌಲ್ಯದ ಕೃಷಿ ಜಮೀನು ಹೊಂದಿದ್ದಾರೆ. 16.01 ಕೋಟಿ ರೂ.ಗಳ ಕೃಷಿಯೇತರ (7ನೇ ಪುಟಕ್ಕೆ)

## ವಿನಯ್ ಕುಮಾರ್ ಆಸ್ತಿ ಮೌಲ್ಯ 56.21 ಕೋಟಿ ರೂ.



ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಜಿ.ಬಿ. ವಿನಯ್ ಕುಮಾರ್ ಅವರು ಹೊಂದಿರುವ ಆಸ್ತಿ ಮೌಲ್ಯ 56.21 ಕೋಟಿ ರೂ. ಆಗಿದೆ ಎಂದು ನಾಮಪತ್ರದ ವೇಳೆ ದಾಖಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

ಲೋಕಸಭಾ ಚುನಾವಣೆಗೆ ನಾಮಪತ್ರದ ವೇಳೆ ಅವರು ಸಲ್ಲಿಸಿರುವ ವಿವರಗಳ ಪ್ರಕಾರ, 2022-23ರ ಸಾಲಿನಲ್ಲಿ ಪಡೆದ ಒಟ್ಟು ಆದಾಯ 4.14 ಕೋಟಿ ರೂ. ಅವರ ಒಟ್ಟು ಚರಾಸ್ತಿ ಮೌಲ್ಯ 9.07 ಕೋಟಿ ರೂ. ಆಗಿದೆ. ಸ್ಥಿರಾಸ್ತಿಯ ಮೌಲ್ಯ 47.14 ಕೋಟಿ ರೂ. ಕೈಯ್ಯಲ್ಲಿರುವ ನಗದು 1.75 ಲಕ್ಷ ರೂ. ಬ್ಯಾಂಕ್ ಸೇರಿದಂತೆ ಹಲವು (7ನೇ ಪುಟಕ್ಕೆ)




continued from 3rd page
521 SAHANA H GOWDA
521 HARSHA P L
520 DARSHAN S
520 AISHWARYA H
520 SUPRIYA G T
520 NIKHIL B J
520 H M NANDAN
520 NAVEEN N
520 MANOJ P B
520 RITU R LOKHANDE
519 MARULASIDDESH G B
519 D S ABHINAYA
519 YUKTHA MADHUKAR
519 LAKSHMI D R
519 MYTHRI G S
519 SHRI GOWRI A N
519 TASEED NAMEER KHAN
519 S VRUSHANK
518 POOJA BELAGAVI
518 LISHA ACHARYA A S
518 YUVARAJ C T
518 M B KUSHAL
518 SHANMUKA M
518 SRUJAN N SALANKI
517 MALLIKARJUNA G
517 SHREYA M ARKASALI
517 AKHILESH M
517 MANOJ H
517 B V SHREYAS
517 THARUNA KUMAR K
516 SAKSHIN U K
516 SANGAMESH R
516 HARSHITHA S B
516 MONISHA M
516 V S ABHAY GHOSH
516 RAHUL C B
516 THARINI N
515 VINAY S K
515 KAVYA M DONI
515 HARSHA H
515 PRATHEEK HIREMATH
515 CHINMAYI S MAKARI
514 NANDINI J T
514 SUJANA
514 E C SANDHYA
514 RAJATH KUMAR J
514 LALITHA G S
513 BHUVANGOWDA L K
513 KAVANA M R
513 AMRAHA KHANUM
513 ROHITH A
513 CHANDU G S S
513 JAYALAKSHMI M N
512 H RAKSHITHA
512 PRATHIBHA D S
512 ADITYA H R
512 SAGAR T N
512 A TUSHAR
511 ASHWIN U K
511 KAVYA S C
511 AMRUTHESH S K
511 ANUSHREE K M
510 ABHISHEK H
510 NIDHISHREE S M
510 BASAVANAGOWDA B G
ADMISSIONS ARE IN PROGRESS
FOR I PUC -2024-25
RESULT ANALYSIS
99 % & above 02
98 % & above 13
97 % & above 33
96 % & above 54
95 % & above 99
94 % & above 139
93 % & above 184
92 % & above 226
91 % & above 278
90 % & above 324
Our Remarkable NEET Results
Our Supremacy in producing NEET-Top Results Spontaneously Continued from single campus without Long term Students
NEET 2023
2nd Rank 655/720
MAHANTH RAKSHA S B
R.No: 2703030310
NEET 2022
District 1st Rank 705/720
STATE 3rd BEST MARK
ALL INDIA 23rd RANK
M SREE BARUNI
R.No: 2703020161
NEET 2021
District 1st Rank 695/720
State-6th Rank
UTHSALA CHOWDRY
H.T.No: 2703001511
677/720 657/720 655/720 647/720 645/720 635/720 633/720 633/720 631/720 628/720 626/720 626/720 622/720 619/720 618/720 617/720 617/720
616/720 615/720 610/720 609/720 609/720 604/720 604/720 603/720 603/720 602/720 602/720 601/720 601/720 600/720 600/720 600/720
Many more...
Four Times District First in NEET in the Past Six Years
NEET - 2017 DISTRICT 1st RANK AIR 25 622/720 MARKS
NEET - 2018 AIR 693 603/720 MARKS
NEET - 2019 DISTRICT 1st RANK AIR 22 643/720 MARKS
NEET - 2020 AIR 53 657/720 MARKS
NEET - 2021 DISTRICT 1st RANK AIR 307 695/720 MARKS
NEET - 2022 DISTRICT 1st RANK AIR 23 705/720 MARKS
Our well deserved JEE - MAINS 2024 Result
MOHAMMED RAFIQ MALAGI
ROLL NO:KK06002521
99.09 Percentile
SURYA S
ROLL NO:KK06002990
98.28 Percentile
DHANUSH M S
ROLL NO:KK06002083
98.23 Percentile
NAVEEN H S
ROLL NO:KK15002028
97.85 Percentile
AKASH P
ROLL NO:KK06001136
97.09 Percentile
SRUJAN S
ROLL NO:KK15002454
96.79 Percentile
96.75 96.32 96.00 95.42 95.39 94.76 94.09 94.01 93.75
93.37 93.35 93.22 93.00 91.47 91.15 90.77 90.23 90.17
Courses offered:
PCMB | PCMCs
Coaching offered:
NEET / JEE / KCET / NATA
Contact: 9900052362, 9036282626, 9900052370, 9900559104

# ಚನ್ನಗಿರಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧ

## ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಭರವಸೆ



ಚನ್ನಗಿರಿ, ಏ.12- ಚಿತ್ರದುರ್ಗ-ಚನ್ನಗಿರಿ-ಶಿವಮೊಗ್ಗ ದ್ವಿಪಥ ಹೆದ್ದಾರಿಯನ್ನು 334 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ದಾವಣಗೆರೆ-ಚನ್ನಗಿರಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರದಿಂದ ತಾತ್ವಿಕ ಅನುಮೋ ದನೆ ಸಿಕ್ಕಿದ್ದು, ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಚನ್ನಗಿರಿ ತಾಲ್ಲೂಕಿನಲ್ಲಿ ಸಮಗ್ರ ನೀರಾವರಿ ಯೋಜನೆ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿಗೆ ನಾನು ಕಟಿಬದ್ಧಳಾಗಿದ್ದೇನೆ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಚನ್ನಗಿರಿ ತಾಲ್ಲೂಕಿನ 20 ಕ್ಕೂ ಹೆಚ್ಚು ಗ್ರಾಮಗಳಲ್ಲಿ ತೆರೆದ ವಾಹನದಲ್ಲಿ ಮತಯಾಚನೆ ಮಾಡಿ ಮಾತನಾಡಿದ ಅವರು, ಸಂಸದ ಜಿ.ಎಂ.ಸಿದ್ದೇಶ್ವರ ಅವರು 20 ವರ್ಷಗಳಲ್ಲಿ ಚನ್ನಗಿರಿ ತಾಲ್ಲೂಕಿನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ನಿಮ್ಮ ಸೇವೆ ಮಾಡಲು ಈ ಬಾರಿ ನನಗೆ ಅವಕಾಶ ಸಿಕ್ಕಿದೆ. ತಾಲ್ಲೂಕಿನ ಸಮಗ್ರ ನೀರಾವರಿ ಯೋಜನೆ ಯಶಸ್ವಿ ಅನುಷ್ಠಾನ ಹಾಗೂ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಅಭಿ ವೃದ್ಧಿಗೆ ನಾನು ಶ್ರಮಿಸುತ್ತೇನೆ ಎಂದರು.

ಜಿ.ಎಂ.ಸಿದ್ದೇಶ್ವರ ಅವರು ಜಿಲ್ಲೆಯ 2ನೇ ಆದರ್ಶ ಗ್ರಾಮವಾಗಿ ಚನ್ನಗಿರಿ ತಾಲ್ಲೂಕಿನ ಮಲ್ಲಾಪುರ ಗ್ರಾಮ ಆಯ್ಕೆ ಮಾಡಿಕೊಂಡು ಸುಮಾರು 2.11 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸಿದ್ದಾರೆ. 1.50 ಕೋಟಿ ವೆಚ್ಚದಲ್ಲಿ ರೈತರಿಗೆ ಅನುಕೂಲವಾಗುವಂತೆ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿಸಿ ವಿದ್ಯುತ್ ಸಂಪರ್ಕ ಕೊಡಿಸಿದ್ದಾರೆ.

ಸಂತೆಬೆನ್ನೂರಿನಲ್ಲಿ ಮೌಲಾನಾ ಆಜಾದ್ ಮಾದರಿ ಶಾಲೆ ನಿರ್ಮಾಣಕ್ಕೆ 2.35 ಕೋಟಿ ಅನುದಾನ, ದೇವರಹಳ್ಳಿಯಲ್ಲಿ 9.50 ಕೋಟಿ ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್, ಚನ್ನಗಿರಿ ಪಟ್ಟಣದಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ 4.12 ಕೋಟಿ, 15ನೇ ಹಣಕಾಸು ಯೋಜನೆಯಲ್ಲಿ ಪುರಸಭೆಗೆ 93 ಲಕ್ಷ ರೂಪಾಯಿ ಅನುದಾನ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ನರೇಂದ್ರ ಮೋದಿ ಅವರು ಪ್ರಧಾನಿ ಆದ ಮೇಲೆ ದೇಶ ಸರ್ವಾಂಗೀಣ ಅಭಿವೃದ್ಧಿ ಆಗಿದೆ. ದೇಶದ ರಕ್ಷಣೆ, ಸನಾತನ ಧರ್ಮದ ಉಳಿವು, ಏಳ್ಗೆಗಾಗಿ ಮೋದಿ ಜೀ ಅವರು ಅಹೋರಾತ್ರಿ ಶ್ರಮಿಸುತ್ತಿದ್ದಾರೆ. ಅಂತಹ ಧೀಮಂತ ನಾಯಕ ನಮಗೆ-ನಿಮಗೆ ಸಿಕ್ಕಿರುವುದು ಯಾವ ಜನ್ಮದ ಪುಣ್ಯವೋ ಗೊತ್ತಿಲ್ಲ. ಮೋದಿ ಜೀ ಅವರು ಮೂರನೇ ಬಾರಿಗೆ ಪ್ರಧಾನಿಯಾದರೆ ನಮ್ಮ ಭವಿಷ್ಯದ ಮಕ್ಕಳು, ಹೆಣ್ಣು ಮಕ್ಕಳು ನಿರ್ಭೀತಿಯಿಂದ ಬಾಳಬಹುದು. ಅಲ್ಲಿ ಮೋದಿ ಜೀ ಅವರು ಪ್ರಧಾನಿ ಆಗಬೇಕು ಎಂದರೆ ಇಲ್ಲಿ ನೀವು ನನಗೆ ಹೆಚ್ಚಿನ ಮತ ನೀಡಿ ಗೆಲ್ಲಿಸಿ ಕಳುಹಿಸಬೇಕು. ನಿಮ್ಮ ಸೇವೆ ಮಾಡಲು ನನಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಬಿಜೆಪಿ ಯುವ ಮುಖಂಡ ಮಾಡಾಳ್ ಮಲ್ಲಿಕಾರ್ಜುನ್ ಮಾತನಾಡಿ, ಇದು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆ ಅಲ್ಲ. ಲೋಕಸಭಾ ಚುನಾವಣೆ. ದೇಶದ ಚುನಾವಣೆ. ದೇಶದ ಚುಕ್ಕಾಣಿ ಯಾರು ಹಿಡಿಯಬೇಕು ಅನ್ನೋ ಚುನಾವಣೆ. ದೇಶದ ಒಳಿತಿಗಾಗಿ, ಅಭಿವೃದ್ಧಿಗಾಗಿ ತಾವೆಲ್ಲ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕು. ಚನ್ನಗಿರಿ ತಾಲ್ಲೂಕಿನ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಗಾಯತ್ರಿ ಅಮ್ಮನವರಿಗೆ ಮತ ಚಲಾಯಿಸುವ ಮೂಲಕ ಮೋದಿ ಅವರ ಕೈಬಲಪಡಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಮುಖಂಡ, ತುಮ್ಕೋಸ್ ಮಾಜಿ ಅಧ್ಯಕ್ಷ ಎಚ್.ಎಸ್.ಶಿವಕುಮಾರ್ ಮಾತನಾಡಿ, ಈ ಬಾರಿ ವಿಕಸಿತ ಭಾರತ್, ಮತ್ತೊಮ್ಮೆ ಮೋದಿ ಎಂದು ಚುನಾವಣೆಗೆ ಹೋಗುತ್ತಿದ್ದೇವೆ. ಎಲ್ಲರೂ ಮೋದಿ ಮೋದಿ ಎಂದು ಪ್ರಭಾವಿತರಾಗಿದ್ದಾರೆ. ಮೋದಿ ಅವರು ನೀಡಿದ ಎಲ್ಲ ಯೋಜನೆಗಳನ್ನು ಸಾರ್ವಜನಿಕರು ಪಡೆದುಕೊಂಡಿದ್ದಾರೆ. ಎಲ್ಲ ವರ್ಗದವರು ಮೋದಿ ಅವರನ್ನು ಮೆಚ್ಚಿಕೊಂಡಿದ್ದಾರೆ. ನಾವು ಕೂಡ ಪ್ರತಿ ಗ್ರಾಮದಲ್ಲಿರುವ ಎಲ್ಲ ವರ್ಗ, ಸಮುದಾಯದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗಾಯತ್ರಿ ಅಕ್ಕನವರಿಗೆ ಮತ ಹಾಕಿಸಬೇಕು ಎಂದು ಕರೆ ನೀಡಿದರು.

ಎತ್ತಿನ ಬಂಡಿಗೆ ಕೀಲು ಎಷ್ಟು ಮುಖ್ಯವೋ ಹಾಗೆಯೇ ಗ್ರಾಮದಲ್ಲಿರುವ ಸಣ್ಣ ಸಣ್ಣ ಸಮುದಾಯವೂ ನಮಗೆ ಮುಖ್ಯ. ನಮ್ಮ ಕಾರ್ಯಕರ್ತರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮತ ಹಾಕಿಸಬೇಕು. ಮತದಾನದವರೆಗೂ ಪ್ರತಿ ದಿನ ಗ್ರಾಮದಲ್ಲಿ ಮೋದಿ ಅವರ ಸಾಧನೆ, ಕೇಂದ್ರ ಸರ್ಕಾರದ ಯೋಜನೆ, ಸಂಸದ ಜಿ.ಎಂ. ಸಿದ್ದೇಶಣ್ಣನ ಅಭಿವೃದ್ಧಿ ಕೆಲಸಗಳ ಬಗ್ಗೆ ಪ್ರತಿ ಮನೆ ಮನೆಗೂ ತಲುಪಿಸಬೇಕು ಎಂದು ಸಲಹೆ ನೀಡಿದರು.

ಮಂಡಲದ ಅಧ್ಯಕ್ಷರು, ಮಂಡಲದ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಬೂತ್ ಮಟ್ಟದ ಅಧ್ಯಕ್ಷರು, ಗ್ರಾಮದ ಬಿಜೆಪಿ ಮುಖಂಡರು ಸೇರಿದಂತೆ ಚನ್ನಗಿರಿ ವಿಧಾನ ಸಭಾ ಕ್ಷೇತ್ರದ ಮುಖಂಡರು ಇದ್ದರು.

**ಎಲ್ಲೆಲ್ಲಿ ಪ್ರಚಾರ:** ಚನ್ನಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕರೇಕಟ್ಟೆ, ಕೆರೆಬಿಳಚಿ, ಸೋಮಲಾಪುರ, ಕೊಂಡದಹಳ್ಳಿ, ಕಾಕನೂರು, ನುಗ್ಗಿಹಳ್ಳಿ, ಚಿಕ್ಕಗಂಗೂರು, ಕೊರಟಿಕೆರೆ, ಹೆಬ್ಬಳಗೆರೆ, ಹೊದಿಗೆರೆ, ವಡ್ನಾಳ್, ಕಂಚಿಗನಾಳ್, ಮಲಹಾಳ್, ಗೊಪ್ಪೇನಹಳ್ಳಿ, ಪಾಂಡೋಮಟ್ಟಿ, ಮರವಂಜಿ, ನೆಲ್ಲಿಹಂಕಲು, ದುರ್ವಿಗೆರೆ, ತಾವರೆಕೆರೆ ಗ್ರಾಮಗಳಲ್ಲಿ ತೆರೆದ ವಾಹನದ ಮೂಲಕ ಪ್ರಚಾರ ನಡೆಸಿದರು.

# ಶಿವಶಂಕರಪ್ಪನವರಂತೆ ನಾನೂ ಕ್ಷೇತ್ರದ ಅಭಿವೃದ್ಧಿಗೆ ಬದ್ಧ : ಡಾ.ಪ್ರಭಾ ಭರವಸೆ



## ಕುಕ್ಕವಾಡದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಕಾರ್ಯಕರ್ತರ ಸಭೆ

ದಾವಣಗೆರೆ, ಏ.12- ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಅವರ ಪರ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶದ ಕಾರ್ಯಕರ್ತರ ಸಭೆ ಇಂದು ಕುಕ್ಕವಾಡದ ದಾವಣಗೆರೆ ಶುಗರ್ಸ್ ಕಾರ್ಖಾನೆ ಆವರಣದಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪನವರು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದು, ಗೃಹಲಕ್ಷ್ಮೀ ಯೋಜನೆಯಿಂದ 4,27,236 ಫಲಾನುಭವಿಗಳು, ಶಕ್ತಿ ಯೋಜನೆಯಿಂದ 30 ಲಕ್ಷಕ್ಕೂ ಅಧಿಕ ಫಲಾನುಭವಿಗಳು, 4 ಲಕ್ಷಕ್ಕೂ ಅಧಿಕ ಮನೆಗಳಿಗೆ ಗೃಹಜ್ಯೋತಿ ಸೌಲಭ್ಯ, 13 ಲಕ್ಷ ಫಲಾನುಭವಿಗಳ ಖಾತೆಗೆ ಅನ್ನಭಾಗ್ಯ ಯೋಜನೆಯ ಹಣ ಪಾವತಿ ಮಾಡಲಾಗಿದ್ದು, ಜಿಲ್ಲೆಯ 4,753 ನಿರುದ್ಯೋಗಿ ಯುವಕರಿಗೆ ನಿರುದ್ಯೋಗ ಭತ್ಯೆ ನೀಡಲಾಗಿದೆ ಎಂದರು.

ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಪಂಚ ಗ್ಯಾರಂಟಿಗಳನ್ನು ನೀಡಲಾಗುವುದು ಎಂದ ಅವರು ಮಹಿಳಾ ನ್ಯಾಯ, ಯುವ ನ್ಯಾಯ, ಶ್ರಮಿಕ ನ್ಯಾಯ, ರೈತ ನ್ಯಾಯ ಹಾಗೂ ಪಾಲುದಾರಿಕೆ ನ್ಯಾಯ ಎಂಬ ಯೋಜನೆ ಗಳನ್ನು ಅನುಷ್ಠಾನಕ್ಕೆ ತರಲಾಗುವುದು ಎಂದರು.

ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ|| ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ನಾನು ರಾಜಕೀಯಕ್ಕೆ ಬರಲು ನಮ್ಮ ಮಾವನವರಾದ ಶಾಮನೂರು ಶಿವಶಂಕರಪ್ಪನವರು ಸ್ಫೂರ್ತಿ. ಅವರು ಈ ಇಳಿ ವಯಸ್ಸಿನಲ್ಲೂ ಸಹ ಜನರಿಗೆ ಸ್ಪಂದಿಸುವ ರೀತಿ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಅನುದಾನ ತರುವ ರೀತಿ ಇತರರಿಗೆ ಸ್ಫೂರ್ತಿದಾಯಕವಾಗಿದೆ ಎಂದರು.

ನಮ್ಮ ಮಾವನವರಾದ ಡಾ|| ಶಾಮನೂರು ಶಿವಶಂಕರಪ್ಪನವರ ಬೆಂಬಲ ನನ್ನ ಪತಿ ಎಸ್.ಎಸ್.ಮಲ್ಲಿಕಾರ್ಜುನ್, ನಮ್ಮ ಮಾವನವರಾದ ಎಸ್.ಎಸ್.ಗಣೇಶ್, ಎಸ್.ಎಸ್.ಬಕ್ಕೇಶ್ ಸೇರಿದಂತೆ ಕುಟುಂಬದ ಎಲ್ಲರ ಸಹಕಾರದಿಂದ ಇಂದು ನಾನು ಚುನಾವಣೆಗೆ ಸ್ಪರ್ಧಿಸಿದ್ದು, ನಿಮ್ಮಗಳ ಆಶೀರ್ವಾದ ನಮ್ಮ ಕುಟುಂಬದ ಮೇಲೆ ಸದಾ ಇದ್ದು, ಮುಂದೆಯೂ ಸಹ ಸಹಕಾರ ನೀಡುವಿರಿ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿದ್ದು, ಇದೀಗ ಮತ್ತಷ್ಟು ಅಭಿವೃದ್ಧಿ ಕೆಲಸಕ್ಕೆ ಮಾವನವರಾದ ಡಾ|| ಶಾಮನೂರು ಶಿವಶಂಕರಪ್ಪನವರು ಅನುದಾನ ತಂದಿದ್ದು, ಈಗಾಗಲೇ ಕಾಮಗಾರಿಗಳು ಆರಂಭಗೊಂಡಿವೆ. ನಾನು ಸಹ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕೇಂದ್ರದಿಂದ ಹೆಚ್ಚಿನ ಅನುದಾನ ತರುತ್ತೇನೆ ಎಂದು ತಿಳಿಸಿದರು.

ಉದ್ಯಮಿ ಎಸ್.ಎಸ್.ಗಣೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರುಗಳಾದ ತುರ್ಚಘಟ್ಟದ ಎಸ್. ಬಸವರಾಜಪ್ಪ, ಹದಡಿ ಜಿ.ಸಿ.ನಿಂಗಪ್ಪ, ಪುಷ್ಪಾ ಸುರೇಶ್, ಹದಡಿ ಹಾಲಪ್ಪ, ಶಿರಮಗೊಂಡನಹಳ್ಳಿ ರುದ್ರೇಶ್, ಆರನೇಕಲ್ಲು ಮಂಜಣ್ಣ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರುಗಳಾದ ದಿಳ್ಳೆಪ್ಪ, ಸುಧಾ ಮಂಜುನಾಥ್, ಕುಕ್ಕವಾಡ ಮಂಜುನಾಥ್, ಮಹೇಶ್ವರಪ್ಪ, ಲಿಂಗೇಶ್, ಶಂಕರ್, ಸತೀಶ್ ತುರ್ಚಘಟ್ಟ, ಅನ್ವರ್, ರಿಯಾಜ್, ಇರ್ಫಾನ್, ಪೂರ್ಣಿಮಾ, ಉದ್ಯಮಿ ಅಭಿಜಿತ್ ಗಣೇಶ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಹಾಗೂ ವಿವಿಧ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು, ಮುಖಂಡರುಗಳು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಬೆಳವನೂರು, ಕೈದಾಳ್, ಹೊಸ ಕೋಳೇನಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ನೂರಾರು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

# ಹೊನ್ನಾಳಿ : ಇಳೆಗೆ ತಂಪೆರೆದ ಮಳೆ



ಹೊನ್ನಾಳಿ, ಏ. 12 - ಬಿರು ಬಿಸಿಲಿನ ತೀವ್ರತೆಗೆ ಹೈರಾಣಾಗಿದ್ದ ಹೊನ್ನಾಳಿ ಜನತೆಗೆ ಶುಕ್ರವಾರ ಸಂಜೆ ಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ತಂಪೆರೆಯುವಂತೆ ಮಾಡಿತು. ಸಂಜೆ 4 ಗಂಟೆ ಸುಮಾರಿಗೆ ಜೋರಾಗಿ ಗಾಳಿ ಬೀಸಿ ಮಳೆ ಬರುವ ಮುನ್ಸೂಚನೆ ನೀಡಿತ್ತು.

ಹಿಂದೆಂದಿಗಿಂತಲೂ ದಾವಣಗೆರೆ ಜಿಲ್ಲಾದ್ಯಂತ ತಾಪಮಾನ ಹೆಚ್ಚಾಗಿದ್ದು, ಅಡಿಕೆ ಬೆಳೆ ಬೆಳೆದ ರೈತರು ತಮ್ಮ ಜಮೀನುಗಳಿಗೆ ತುಂಗಾ-ಭದ್ರಾ ನದಿ, ಕೆರೆಗಳಿಂದ ಟ್ಯಾಂಕರ್ ಮೂಲಕ ನೀರುಣಿಸಿ ತಮ್ಮ ತೋಟವನ್ನು ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ಇನ್ನೂ ಜನಸಾಮಾನ್ಯರು ಉರಿದೆ ಬೆಂದೆ ಎನ್ನುವಂತೆ ಬಿಸಿಲಿನ ಬೇಗೆಗೆ ತತ್ತರಿಸಿ ಹೋಗಿದ್ದರು. ಶಾಲಾ-ಕಾಲೇಜುಗಳಿಗೆ ರಜೆ ಇರುವ ಹಿನ್ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳನ್ನು ಬಿಸಿಲಿನ ತಾಪಕ್ಕೆ ಹೆದರಿ ಹೊರಗೆ ಬಿಡದೇ ಮನೆಯಲ್ಲಿರಿಸಿಕೊಳ್ಳಲು ಹೈರಾಣಾಗಿ ಹೋಗಿದ್ದರು.

# ನಗರದಲ್ಲಿ ಇಂದು ಜಿಲ್ಲಾಡಳಿತದಿಂದ ದೇವರ ದಾಸಿಮಯ್ಯ ಜಯಂತಿ

ಜಿಲ್ಲಾಡಳಿತದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಸರಳವಾಗಿ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

# ಅಂಬೇಡ್ಕರ್ ಬಂದರೂ ಸಂವಿಧಾನ ರದ್ದು ಮಾಡಲು ಸಾಧ್ಯವಿಲ್ಲ : ಮೋದಿ

ಜೈಪುರ, ಏ. 12 – ತಮ್ಮ ಸರ್ಕಾರ ಸಂವಿಧಾನವನ್ನು ಗೌರವಿಸುತ್ತದೆ. ಸ್ವತಃ ಅಂಬೇಡ್ಕರ್ ಅವರೇ ಬಂದರೂ ಈಗ ಸಂವಿಧಾನ ರದ್ದು ಮಾಡಲು ಸಾಧ್ಯವಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಬರ್ಮಾರ್‌ನಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿತ್ತು. ಈಗ ಅದೇ ಪಕ್ಷ ಸಂವಿಧಾನದ ಹೆಸರಿನಲ್ಲಿ ತಮ್ಮನ್ನು ದೂಷಿಸುತ್ತಿದೆ ಎಂದಿದ್ದಾರೆ.

ತಮ್ಮ ಸರ್ಕಾರ ಸಂವಿಧಾನ ದಿನಾಚರಣೆಯ ವಿಚಾರ ಜಾರಿಗೆ ತಂದಿತ್ತು. ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಐದು ಕ್ಷೇತ್ರಗಳ ಅಭಿವೃದ್ಧಿ ಮಾಡಲಾಗಿದೆ ಎಂದು ಮೋದಿ ಹೇಳಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಾವೇ ಬಂದರೂ ಸಂವಿಧಾನ ರದ್ದು ಮಾಡಲು ಸಾಧ್ಯವಿಲ್ಲ. ಸಂವಿಧಾನ ಸರ್ಕಾರಕ್ಕೆ ಧರ್ಮಗ್ರಂಥ ಇದ್ದಂತೆ. ನಮಗೆ ಸಂವಿಧಾನವೇ ಎಲ್ಲವೂ ಆಗಿದೆ ಎಂದು ಮೋದಿ ತಿಳಿಸಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ರೂಪಿಸಿದ ಸಂವಿಧಾನ ನಾಶಗೊಳಿಸುವುದು ಮೋದಿ ಸರ್ಕಾರದ ಗುರಿಯಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದರು.

# ಇರಾನ್, ಇಸ್ರೇಲ್‌ಗೆ ತೆರಳದಂತೆ ಎಚ್ಚರಿಕೆ

ನವದೆಹಲಿ, ಏ. 12 – ಇರಾನ್ ಹಾಗೂ ಇಸ್ರೇಲ್‌ಗೆ ತೆರಳದಂತೆ ಭಾರತದ ನಾಗರಿಕರಿಗೆ ಸೂಚನೆ ನೀಡಲಾಗಿದೆ. ಉಭಯ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ನೀಡಲಾಗಿದೆ. ಇಸ್ರೇಲ್‌ನ ಕಟ್ಟಡ ನಿರ್ಮಾಣ ವಲಯಕ್ಕೆ ಭಾರತದ ಕಾರ್ಮಿಕರನ್ನು ಕಳಿಸಲಾಗುತ್ತಿತ್ತು. ಈ ಪ್ರಕ್ರಿಯೆಯನ್ನೂ ನಿಲ್ಲಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಇದುವರೆಗೂ 6 ಸಾವಿರ ಕಾರ್ಮಿಕರು ಇಸ್ರೇಲ್‌ಗೆ ತೆರಳಿದ್ದಾರೆ. ಸಿರಿಯಾದ ಡಮಸ್ಕಸ್‌ನಲ್ಲಿರುವ ಇರಾನ್ ರಾಯಭಾರಿ ಕಚೇರಿ ಮೇಲೆ ದಾಳಿ ನಡೆಸಲಾಗಿತ್ತು. ನಂತರದಿಂದ ಉದ್ವಿಗ್ನತೆ ತೀವ್ರವಾಗಿದೆ.

# ಪ್ರಧಾನಿ ಮೋದಿ ಅಭಿವೃದ್ಧಿ ಪ್ರಶ್ನಿಸಿದ ಖರ್ಗೆ



ಬೆಂಗಳೂರು, ಏ. 12- ಹತ್ತು ವರ್ಷಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಏನು ಅಭಿವೃದ್ಧಿ ಮಾಡಿದ್ದಾರೆ ಹೇಳಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಶ್ನಿಸಿದ್ದಾರೆ.

ಕಲಬುರಗಿಯಲ್ಲಿ ಏಮ್ಸ್ ಸ್ಥಾಪಿಸಿ ಎಂದು ಮೋದಿಗೆ ಮನವಿ ಮಾಡಿದೆ, ಆದರೆ ತಿರಸ್ಕಾರ ಮಾಡಿದರು. ಕಲಬುರಗಿಗೆ ಬಂದು ಹೋಗಿದ್ದಾರೆ, ಹತ್ತು ವರ್ಷಗಳ ತಮ್ಮ ಅಧಿಕಾರವಧಿಯಲ್ಲಿ ಈ ಭಾಗಕ್ಕೆ ಏನು ಕೊಟ್ಟಿದ್ದಾರೆ ಎಂದು ಹೇಳಬೇಕಿತ್ತು ಎಂದರು.

ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ತಮ್ಮ ಅವಧಿಯಲ್ಲಿ ಮಂಜೂರಾಗಿದ್ದ ರೈಲ್ವೆ ವಲಯ ಯೋಜನೆ ವಾಪಸ್ ಹೋಗಿದೆ. ನನ್ನ ಅವಧಿಯಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳಲ್ಲಿ ಶೇ.10ರಷ್ಟು ಅಭಿವೃದ್ಧಿ ಮಾಡಿದ್ದರೆ ತೋರಿಸಲಿ ಎಂದು ಸವಾಲು ಹಾಕಿದರು.

ಮೋದಿ ತಮ್ಮ ಗ್ಯಾರಂಟಿ ಏನು ಎಂದು ಮೊದಲು ಜನರಿಗೆ ತಿಳಿಸಲಿ. ರಾಜ್ಯದಲ್ಲಿ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳ ರೀತಿಯಲ್ಲೇ ತಮ್ಮ ಗ್ಯಾರಂಟಿ ಎಂದು ಹೇಳುತ್ತಿದ್ದಾರೆ. ಆದರೆ ಯಾವ ಗ್ಯಾರಂಟಿ ಎಂದು ಹೇಳಿಲ್ಲ.

ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ಬೆಲೆ ಏರಿದೆ, ಇದು ನಿಮ್ಮ ಗ್ಯಾರಂಟಿನಾ? ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಕೊಡುತ್ತೇನೆ ಎಂದು ಹೇಳಿ, ಉದ್ಯೋಗ ಕೊಡಲಿಲ್ಲ, ಇದು ನಿಮ್ಮ ಗ್ಯಾರಂಟಿನಾ? ಪ್ರತಿಯೊಬ್ಬರಿಗೆ ಹದಿನೈದು ಲಕ್ಷ ರೂ. ಕೊಡುತ್ತೇನೆ ಎಂದಿದ್ದರು, ಕೊಟ್ಟಿರಾ? ರೈತರ ಆದಾಯ ದ್ವಿಗುಣ ಮಾಡುವುದಾಗಿ ಹೇಳಿದ್ದರು, ಮಾಡಿದ್ದಾರಾ? ಎಂದು ಪಶ್ನಿಸಿದರು.

ತಮ್ಮ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ, ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪಿಸಿದ್ದೇನೆ. ಮೂವತ್ತೇಳು ಹೊಸ ರೈಲು ಓಡಿಸಿದ್ದೇನೆ. ಜವಳಿ ಪಾರ್ಕ್ ಮಂಜೂರು ಮಾಡಿಸಿದ್ದೇನೆ. ಇವುಗಳನ್ನು ನೀವು ಮಾಡಿ ಎಂದು ನನಗೆ ಯಾರೂ ಹೇಳಿರಲಿಲ್ಲ, ನಮ್ಮ ಭಾಗದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇನೆ, ಈಗ ಓಟು ಕೇಳುತ್ತಿದ್ದೇನೆ.

ಭ್ರ ಷ್ಟಾ ಚಾ ರಿ ಗ ಳ ನ್ನು ಬಿಡುವುದಿಲ್ಲವೆಂದು ಮೋದಿ ಹಾಗೂ ಷಾ ಹೇಳುತ್ತಾರೆ, ಬಿಡುವ ಮಾತಿರಲಿ, ನಿಮ್ಮ ಪಕ್ಕದಲ್ಲೇ ಕೂಡಿಸಿಕೊಂಡಿದ್ದೀರಲ್ಲ ಎಂದರು.

# ಅಸಗೋಡು ವಡ್ಡರಹಟ್ಟಿ ಗ್ರಾಮಸ್ಥರಿಂದ ಪ್ರಭಾ ಎಸ್ಸೆಸ್ಸೆಂಗೆ ಬೆಂಬಲ



ದಾವಣಗೆರೆ, ಏ.12- ಜಗಳೂರು ವಿಧಾನಸಭಾ ಕ್ಷೇತ್ರದ ಅಸಗೋಡು ವಡ್ಡರಹಟ್ಟಿ ಗ್ರಾಮದ ನೂರಾರು ಗ್ರಾಮಸ್ಥರು ಇಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ, ಕಾಂಗ್ರೆಸ್ ಪಕ್ಷದ ಲೋಕಸಭಾ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸಲಾಗುವುದು ಎಂದು ತಿಳಿಸಿದರು.

# ಚುನಾವಣಾ ವೆಚ್ಚ ವೀಕ್ಷಕರ ಆಗಮನ ದೂರು ಸಲ್ಲಿಸಲು ಮುಕ್ತ ಅವಕಾಶ

ದಾವಣಗೆರೆ ಏ.12 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಚುನಾವಣಾ ವೆಚ್ಚ ವೀಕ್ಷಕರನ್ನಾಗಿ ಪ್ರತಿಭಾ ಸಿಂಗ್ ಅವರನ್ನು ನೇಮಕ ಮಾಡಿದ್ದು, ಅವರು ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿದ್ದಾರೆ.

ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳಿದ್ದಲ್ಲಿ ವೀಕ್ಷಕರ ಮೊಬೈಲ್‌ಗೆ ಸಂಪರ್ಕಿಸಬಹುದು. ಅಥವಾ ಇ-ಮೇಲ್ ಮೂಲಕ ದೂರು ನೀಡಬಹುದಾಗಿದೆ. ಇ-ಮೇಲ್ ವಿಳಾಸ ex-pobs13dvg@gmail.com. ಮೊಬೈಲ್ ಸಂಖ್ಯೆ 7795492549.

# ಬಿಜೆಪಿ ಜಾತಿ ಗಣತಿ ವಿರೋಧಿಸುವುದಿಲ್ಲ : ನಡ್ಡಾ

ಛಿಂದ್ವಾರ, ಏ. 12 – ಬಿಜೆಪಿ ಜಾತಿ ಗಣತಿಯನ್ನು ವಿರೋಧಿಸುವುದಿಲ್ಲ. ಆದರೆ, ಕಾಂಗ್ರೆಸ್ ಸಮಾಜವನ್ನು ಒಡೆಯಲು ಜಾತಿ ಗಣತಿ ಬಳಸುತ್ತಿದೆ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದಾರೆ. ಮಧ್ಯ ಪ್ರದೇಶದ ಛಿಂದ್ವಾರಾದಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶದ ರಾಜಕೀಯ ವಿಧಾನವನ್ನು ಬದಲಿಸಿದ್ದಾರೆ. ಇದರಿಂದ ಪ್ರತಿಪಕ್ಷಗಳು ಅತಂತ್ರವಾಗಿವೆ ಎಂದಿದ್ದಾರೆ.

ಈ ಹಿಂದೆ ಜಾತಿ, ಧರ್ಮ ಹಾಗೂ ಪ್ರಾಂತ್ಯ ಇತ್ಯಾದಿಗಳ ಆಧರಿತ ರಾಜಕೀಯವಿತ್ತು. ಕಾಂಗ್ರೆಸ್ ಪಕ್ಷ ದೇಶದ ಸಹೋದರರ ನಡುವೆ ಸಂಘರ್ಷ ತರುತ್ತಿತ್ತು ಎಂದು ನಡ್ಡಾ ಆರೋಪಿಸಿದ್ದಾರೆ.

ಮೋದಿ ನೇತೃತ್ವದಲ್ಲಿ ಅಭಿವೃದ್ಧಿ ರಾಜಕೀಯ ಕೇಂದ್ರ ಸ್ಥಾನಕ್ಕೆ ಬಂದಿದೆ. ಜನರು ಅಭಿವೃದ್ಧಿಯ ಜೊತೆ ಗುರುತಿಸಿಕೊಂಡಿದ್ದಾರೆ. ಈಗ ಮತ ಬ್ಯಾಂಕ್ ಆಧರಿತ ರಾಜಕೀಯ ನಿಂತಿದೆ ಎಂದೂ ಅವರು ಹೇಳಿದರು.

# ಮೊದಲ ದಿನ ಐವರಿಂದ ನಾಮಪತ್ರ

**(5ನೇ ಪುಟದಿಂದ)** ಮೆರವಣಿಗೆ ಮೂಲಕ ಮತ್ತೊಮ್ಮೆ ನಾಮಪತ್ರ ಸಲ್ಲಿಸಲಾಗುವುದು. ಆ ಸಂದರ್ಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸುವ ಬಗ್ಗೆ ಮಾತುಕತೆ ನಡೆಸಲಾಗುವುದು ಎಂದು ತಿಳಿಸಿದರು.

ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ರೂಪಿಸಿರುವ ಐದು ನ್ಯಾಯ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡುತ್ತೇವೆ. ಕಾಂಗ್ರೆಸ್ ಎಂದರೆ ಕಾರ್ಯಕರ್ತರ ಪಕ್ಷ. ಎಲ್ಲರನ್ನೂ ಜೊತೆಗೆ ಕರೆದೊಯ್ಯುತ್ತೇವೆ ಎಂದೂ ಅವರು ತಿಳಿಸಿದರು.

ಕಾಂಗ್ರೆಸ್‌ನಿಂದ ಬಿಜೆಪಿಗೆ ಹೋದವರಿಗೆ ಸರಿಯಾಗಿ ಮಾತನಾಡಿಸುತ್ತಿಲ್ಲ. ಯಾವುದೇ ಬೆಲೆ ಕೊಡುತ್ತಿಲ್ಲ. ಹಣದ ಹಮ್ಮಿನಿಂದ ನೋಡುತ್ತಿದ್ದಾರೆ. ಅನೇಕರು ಸಾಕಾಗಿ ಹೋಗಿದ್ದಾರೆ. ಎಷ್ಟು ಜನ ಕಾಂಗ್ರೆಸ್‌ಗೆ ಬರುತ್ತಾರೆ ಎಂಬುದನ್ನು ಕಾದು ನೋಡಿ ಎಂದು ಮಲ್ಲಿಕಾರ್ಜುನ್ ಹೇಳಿದರು.

**ವಿನಯ್‌ಗೆ ವಿಜಯದ ವಿಶ್ವಾಸ :** ನಾನು ನಡೆಸಿರುವ ಸಮೀಕ್ಷೆಯಂತೆ ಲೋಕಸಭಾ ಚುನಾವಣೆಯಲ್ಲಿ ಶೇ.37ರಷ್ಟು ಮತ ಸಿಗಲಿವೆ. ಜಯಭೇರಿ ಭಾರಿಸಿಯೇ ತೀರುತ್ತೇನೆ ಎಂದು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಜಿ.ಬಿ. ವಿನಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜನರ ಅಭಿಲಾಷೆಯಂತೆ ಪಕ್ಷೇತರನಾಗಿ ನಾಮಪತ್ರ ಸಲ್ಲಿಸಿದ್ದೇನೆ. ಕಾಂಗ್ರೆಸ್ ಮುಖಂಡರ ಜತೆ ಯಾವುದೇ ಮಾತುಕತೆಯಾಗಿಲ್ಲ. ಯಾವ ಕರೆಯೂ ಬಂದಿಲ್ಲ. ಆ ಬಗ್ಗೆ ನನಗೆ ಆಸಕ್ತಿಯೂ ಇಲ್ಲ ಎಂದು ನಾಮಪತ್ರ ಸಲ್ಲಿಕೆಯ ನಂತರ ಮಾತನಾಡಿದ ಅವರು ಹೇಳಿದ್ದಾರೆ.

ಟಿಕೆಟ್ ತಪ್ಪಿದ ಬಳಿಕವೂ 200 ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ಮತದಾರರು ಎರಡೂ ಕುಟುಂಬ ತಿರಸ್ಕರಿಸಿ ನನಗೆ ಅವಕಾಶ ನೀಡಲಿದ್ದಾರೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

## ಪ್ರಭಾ ಆಸ್ತಿ ಮೌಲ್ಯ 44.53 ಕೋಟಿ

**(5ನೇ ಪುಟದಿಂದ)** ಜಮೀನಿನ ಒಡತಿಯಾಗಿದ್ದಾರೆ. ಇದರ ಜೊತೆಗೆ ಪ್ರಸಕ್ತ 21 ಕೋಟಿ ರೂ. ಮಾರುಕಟ್ಟೆ ಮೌಲ್ಯದ ವಸತಿ ಕಟ್ಟಡವನ್ನೂ ಹೊಂದಿದ್ದಾರೆ. ಅವರು 97.28 ಲಕ್ಷ ರೂ.ಗಳ ಸಾಲವನ್ನೂ ಹೊಂದಿದ್ದಾರೆ. ಪ್ರಭಾ ಅವರು ಕುವೆಂಪು ವಿಶ್ವವಿದ್ಯಾಲಯದಿಂದ ಬಿ.ಡಿ.ಎಸ್. ವೈದ್ಯಕೀಯ ಪದವಿ ಪಡೆದಿದ್ದಾರೆ.

ಪ್ರಭಾ ಅವರ ಪತಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು 194.88 ಕೋಟಿ ರೂ. ಮೌಲ್ಯದ ಆಸ್ತಿಗೆ ಮಾಲೀಕರಾಗಿದ್ದಾರೆ.

ಇದರಲ್ಲಿ ಚರಾಸ್ತಿಯ ಮೌಲ್ಯ 85.13 ಕೋಟಿ ರೂ. ಹಾಗೂ ಸ್ಥಿರಾಸ್ತಿಯ ಮೌಲ್ಯ 109.75 ಕೋಟಿ ರೂ. ಆಗಿದೆ. ಅವರು 23.60 ಕೋಟಿ ರೂ.ಗಳ ಸಾಲ ಹೊಂದಿದ್ದಾರೆ. ಅವರ ಪುತ್ರ ಸಮರ್ಥ ಮಲ್ಲಿಕಾರ್ಜುನ್ ಅವರು 34.70 ಲಕ್ಷ ರೂ.ಗಳ ಚರಾಸ್ತಿ ಹೊಂದಿದ್ದಾರೆ. ಅವರು ಹೊಂದಿರುವ ಸ್ಥಿರಾಸ್ತಿಯ ಮೌಲ್ಯ 1.51 ಕೋಟಿ ರೂ. ಆಗಿದೆ. ಸಾಲದ ಪ್ರಮಾಣ 13.71 ಲಕ್ಷ ರೂ. ಆಗಿದೆ.

## ವಿನಯ್ ಆಸ್ತಿ ಮೌಲ್ಯ 56.21 ಕೋಟಿ

**(5ನೇ ಪುಟದಿಂದ)** ಸಂಸ್ಥೆಗಳಲ್ಲಿ ಇರಿಸಿರುವ ಠೇವಣಿ 4.20 ಕೋಟಿ ರೂ., ಬಾಂಡ್‌ಗಳ ಮೇಲಿನ ಹೂಡಿಕೆ 40.97 ಲಕ್ಷ ರೂ., ಹೂಡಿಕೆಗಳು 4.43 ಕೋಟಿ ರೂ.

92.50 ಎಕರೆ ಜಮೀನಿಗೆ ಮಾಲೀಕರಾಗಿದ್ದಾರೆ. ಇದರ ಪ್ರಸಕ್ತ ಮಾರುಕಟ್ಟೆ ಮೌಲ್ಯ 14.41 ಕೋಟಿ ರೂ. ಎಂದು ತಿಳಿಸಲಾಗಿದೆ. ಕೈಯಲ್ಲಿರುವ ನಗದು 1.75 ಲಕ್ಷ ರೂ. ಆಗಿದೆ. ಇದೇ ವೇಳೆ ಅವರು ಬ್ಯಾಂಕ್ ಮತ್ತಿತರೆ ಸಂಸ್ಥೆಗಳಿಂದ 9.58 ಕೋಟಿ ರೂ.ಗಳ ಸಾಲವನ್ನೂ ಹೊಂದಿದ್ದಾರೆ. ಜಿ.ಎಸ್.ಟಿ., ಪಾಲಿಕೆ ತೆರಿಗೆ ಸೇರಿದಂತೆ ಒಟ್ಟಾರೆ ಸರ್ಕಾರಕ್ಕೆ 1.31 ಕೋಟಿ ರೂ.ಗಳ ಪಾವತಿ ಬಾಕಿ ಇದೆ. ಇವರು ಬೆಂಗಳೂರಿನ ಗಾರ್ಡನ್ ಸಿಟಿ ಕಾಲೇಜಿನಲ್ಲಿ ಬಿ.ಎಸ್.ಸಿ. ಪದವಿ ಪೂರೈಸಿದ್ದಾರೆ. ಅವರ ಪತ್ನಿ ಎಸ್.ಎಸ್. ಸ್ವಾತಿ, ಕೈಯಲ್ಲಿ 5 ಸಾವಿರ ರೂ. ನಗದು, 13.48 ಲಕ್ಷ ರೂ.ಗಳ ಠೇವಣಿ ಹಾಗೂ 59.61 ಲಕ್ಷ ರೂ.ಗಳ ಹೂಡಿಕೆ ಹೊಂದಿದ್ದಾರೆ.

# ಪಂಚಮಸಾಲಿ ಮುಖಂಡರು ತಟಸ್ಥರಾಗಿರಲು ಒತ್ತಾಯ

ದಾವಣಗೆರೆ, ಏ.12- ಜಿಲ್ಲೆಯ ಪಂಚಮಸಾಲಿ ನಾಯಕರು ಲೋಕಸಭಾ ಚುನಾವಣೆಯಲ್ಲಿ ತಟಸ್ಥರಾಗಿ ಇರುವಂತೆ ಪಂಚಮಸಾಲಿ ಸ್ವಾಭಿಮಾನಿ ಯುವ ಪಡೆ ಒತ್ತಾಯಿಸಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸ್ವಾಭಿಮಾನಿ ಪಡೆಯ ಕಾರ್ಯದರ್ಶಿ ಮಂಜುನಾಥ ಸುಗ್ಗೇರ್, ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳು ಪಂಚಮಸಾಲಿ ಮುಖಂಡರನ್ನು ಕಡೆಗಣಿಸಿವೆ ಎಂದು ಆರೋಪಿಸಿದರು.

ಮಹಿಮಾ ಪಟೇಲ್, ಹೆಚ್.ಎಸ್. ಶಿವಶಂಕರ್, ತೇಜಸ್ವಿ ಪಟೇಲ್, ಹೆಚ್.ಎಸ್. ನಾಗರಾಜ್ ಅವರುಗಳನ್ನು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ನಡೆಸಿಕೊಂಡ ರೀತಿಯನ್ನು ನೋಡಿದರೆ ಈ ಮುಖಂಡರು ಈ ಬಾರಿಯ ಚುನಾವಣೆಯಲ್ಲಿ ತಟಸ್ಥರಾಗಿರುವುದೇ ಸೂಕ್ತ ಎಂದು ಹೇಳಿದರು. ಚುನಾವಣೆ ಸಂದರ್ಭದಲ್ಲಿ ನಿಮ್ಮನ್ನು ಸಂಪರ್ಕಿಸುವ ಮುಖಂಡರು ಮತ್ತೆ ನಿರ್ಲಕ್ಷಿಸುತ್ತಾರೆ. ಈ ಹಿನ್ನೆಲೆಯಲ್ಲಿ ಯಾರ ಪರವಾಗಿಯೂ ಮತ ಕೋರಬಾರದು. ಮನೆಯಲ್ಲಿದ್ದು ಗೌರವಿಸಿಕೊಳ್ಳಿ ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಯುವ ಪಡೆಯ ಅಧ್ಯಕ್ಷ ಚನ್ನಬಸಪ್ಪ ಚಿಕ್ಕಮೇಗಳಗೆರೆ, ಶರಣಪ್ಪ ಚಿಕ್ಕಮೇಗಳಗೆರೆ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಇಂದು ಎ.ಹೆಚ್. ಶಿವಪ್ಪಯ್ಯ ಮತ್ತು ಮರಿ ಮೊಮಕ್ಕಳಾದ ಎ.ಹೆಚ್. ಸಂತೋಷ್, ಎ.ಹೆಚ್.ಸಂದೇಶ್, ಶ್ರೀಮತಿ ದೇವಿಕಾ ಸಮರ್ಥ್ ಪಟೇಲ್, ಕುಮಾರಿ ಮೈರಾ ಸಮರ್ಥ್ ಪಟೇಲ್ ಅವರು ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

# ಅಣಕು ಕೆಸಿಇಟಿ ಪರೀಕ್ಷೆ

ದಾವಣಗೆರೆ, ಏ.12- ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ದಾವಣಗೆರೆ, ಸೆವೆಂತ್ ಸೆನ್ಸ್ ಟ್ಯಾಲೆಂಟ್ ಸೊಲ್ಯೂಷನ್ಸ್ ಸಹಯೋಗದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಮಾಕ್ ಕೆಸಿಇಟಿ ಪರೀಕ್ಷೆ ಆಯೋಜಿಸಿದೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಕೆಸಿಇಟಿ ಪರೀಕ್ಷಾ ತಯಾರಿಗಾಗಿ ಆಸಕ್ತರು ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. 83103 33186, 99168 47774, 9916595356.


## ಕಾಣೆಯಾಗಿದ್ದಾರೆ



ಸಿದ್ದಲಿಂಗೇಶ್ ಹೆಚ್.ಎಂ. ಸ್ವಾಮಿ ವಿವೇಕಾನಂದ ಬಡಾವಣೆ ವಾಸಿಯಾದ ಇವರು ದಿನಾಂಕ : 13.02.2023 ರಂದು ಮಧ್ಯಾಹ್ನ 12.00 ಗೆ ಮನೆಯಿಂದ ಹೊರಗೆ ಹೋದವರು ಇದುವರೆಗೂ ಮನೆಗೆ ಬಂದಿರುವುದಿಲ್ಲ. ಇವರಿಗೆ 47 ವರ್ಷ ವಯಸ್ಸಾಗಿದ್ದು, ಮೆಡಿಕಲ್ ಶಾಪ್ ಕೆಲಸ, ವೀರಶೈವ ಲಿಂಗಾಯ್ತ ಜನಾಂಗ, ಗೋಧಿ ಮೈ ಬಣ್ಣ, ಬಿಳಿ ಶರ್ಟ್, ಪ್ಯಾಂಟ್, ಕನ್ನಡ, ಇಂಗ್ಲಿಷ್, ಹಿಂದಿ ಮಾತನಾಡುತ್ತಾರೆ. ಕನ್ನಡಕ ಧರಿಸಿದ್ದು, ಈತನ ಸುಳಿವು ಯಾರಿಗಾದರೂ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರ್‌ಗೆ ತಿಳಿಸಲು ಕೋರಿದೆ.


**ಫೋ. : 73494 22971**

EduSummer CAMP
ಶೈಕ್ಷಣಿಕ ಬೇಸಿಗೆ ಶಿಬಿರ
Expert Handwriting Training Institute (R.) Bengaluru
EHTI EXPERT
ದಾವಣಗೆರೆಯಲ್ಲಿ ಪ್ರಥಮ ಬಾರಿಗೆ
ವೈಜ್ಞಾನಿಕ ಕೈಬರಹ ಕಲಿಕೆ
ಅವಧಿ : 1 ತಿಂಗಳು ಏಪ್ರಿಲ್ ರಿಂದ ಮೇ
ಸ್ಥಳ : ಯತಾರ್ಥ ಪಬ್ಲಿಕ್ ಸ್ಕೂಲ್ ಶಾಮನೂರು ರಸ್ತೆ, ದಾವಣಗೆರೆ.
ಸಂಪರ್ಕಿಸಿ : 9663939200, 8317319625





# ಇಂದು ಬಕ್ಕೇಶ್ವರ ರಥೋತ್ಸವ : ನೂತನ ರಥದ ವಿಶೇಷತೆ





ಶಿವಾಂಶ ಸಂಭೂತರಾಗಿ ಗುಮ್ಮನೂರಿನಲ್ಲಿ ಅವತರಿಸಿ, ದೇಶ ಪರ್ಯಟನೆ ಮಾಡಿ, ಹರಿಹರ ಕ್ಷೇತ್ರದಲ್ಲಿ ಸ್ವಲ್ಪ ಕಾಲ ನೆಲೆಸಿ, ನಂತರ ದಾವಣಗೆರೆಗೆ ಬಂದು ನೆಲೆಸಿ ಲೀಲಾ ಪವಾಡಗಳನ್ನು ಮೆರೆಯುತ್ತಾ ಚೌಕಿಪೇಟೆಯಲ್ಲಿ ಲಿಂಗೈಕ್ಯರಾಗಿ ಸದ್ಭಕ್ತರನ್ನು ಹರಸುತ್ತಿರುವ ಶ್ರೀ ಗುರು ಶಿವಯೋಗಿ ಬಕೇಶ್ವರ ಸ್ವಾಮಿಯ ರಥೋತ್ಸವ ಇಂದು ನಡೆಯಲಿದೆ.

ನೂತನ ರಥವನ್ನು ನಿರ್ಮಿಸಲಾಗಿದ್ದು, ಈ ರಥದ ವಿಶೇಷತೆಗಳು ಹೀಗಿವೆ.

ಸುಮಾರು 28 ಅಡಿ ಎತ್ತರವಿರುವ ಈ ರಥದ ಗಡ್ಡೆಯೇ ಸುಮಾರು ಎಂಟೂವರೆ ಅಡಿ ಎತ್ತರವಿದ್ದು, 8 ಅಡಿ ಅಗಲದೊಂದಿಗೆ 16 ಕೋನಗಳಲ್ಲಿದೆ. ವೇದ, ಆಗಮಗಳ ಆಧಾರದೊಂದಿಗೆ ದಕ್ಷಿಣ ಭಾರತೀಯ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ರಥದ ಪೂರ್ವ ಭಾಗದಲ್ಲಿ ಶ್ರೀ ಗಣೇಶ ಹಾಗೂ ಉಳಿದ ದಿಕ್ಕುಗಳಲ್ಲಿ ಲಕ್ಷ್ಮಿ-ಸರಸ್ವತಿ-ಮಹಾಕಾಳಿ-ವಿಷ್ಣು-ವೀರಭದ್ರೇಶ್ವರ- ಷಣ್ಮುಖ - ಆಂಜನೇಯ - ಮಹೇಶ್ವರ - ರಾಜರಾಜೇಶ್ವರಿ - ಸೂರ್ಯಾದಿ ನವಗ್ರಹಗಳು ಇಂದ್ರಾದಿ ಅಷ್ಟದಿಕ್ಪಾಲಕರು ಅಲ್ಲದೇ ನಂತರದ ಸಾಲುಗಳಲ್ಲಿ ಮೌನೇಶ್ವರ - ಅಲ್ಲಮಪ್ರಭು - ಯಡಿಯೂರು ಸಿದ್ದಲಿಂಗೇಶ್ವರ - ಕರಿಬಸವೇಶ್ವರ - ರೇಣುಕಾಚಾರ್ಯರು - ಮರುಳಸಿದ್ದರು - ತಿಪ್ಪೇರುದ್ರಸ್ವಾಮಿ - ಹೆಬ್ಬಾಳು ರುದ್ರಸ್ವಾಮಿ - ಬಸವಣ್ಣ - ಅಕ್ಕಮಹಾದೇವಿ ಮುಂತಾದ ಶರಣ ಶರಣೆಯರು ಬಕ್ಕೇಶ್ವರರ ಪವಾಡ ಮುಂತಾದ ಕಾಷ್ಟ ಕೆತ್ತನೆಗಳಿದ್ದು, ಊರ್ಧ್ವ ಸಿಂಹಗಳು ಆನೆ ಸಾಲುಗಳು ಸುಂದರವಾಗಿ ಮೂಡಿಬಂದಿವೆ.

ತೇಗ - ಹೊನ್ನೆ ಹಾಗೂ ಕರಿಮತ್ತಿ ಮರವನ್ನು ಬಳಸಿ, ಗೊಪ್ಪೇನಹಳ್ಳಿಯ ಚಂದ್ರಾಚಾರ್ ಮಕ್ಕಳಾದ ವೀರಾಚಾರ್ ಮುಂತಾದ ಸಹೋದರರು ಸುಮಾರು ಎಂಟು ತಿಂಗಳ ಪರಿಶ್ರಮದೊಂದಿಗೆ ಈ ನೂತನ ರಥವನ್ನು ನಿರ್ಮಿಸಿದ್ದು, ಇಂದಿನ ಮಹಾರಥೋತ್ಸವದಲ್ಲಿ ಇದನ್ನು ಕಣ್ತುಂಬಿಕೊಳ್ಳುವ ಅವಕಾಶ ಭಕ್ತಾದಿಗಳಿಗೆ ಒದಗಿದೆ. ರಥೋತ್ಸವವು ಇಂದು ಸಂಜೆ 7 ಗಂಟೆಯಿಂದ ಜರುಗಲಿದೆ.

ನೂತನ ತೇರಿನಲ್ಲಿ ಮಹಾರಥೋತ್ಸವದ ವಿಶೇಷ ಆಕರ್ಷಣೆಯಾಗಿ ಈ ಬಾರಿ ಉಡುಪಿಯ ಪ್ರಸಿದ್ಧ ಚಂಡೆ ಮೇಳ, ಸಿಂಗಾರ ಮೇಳ, ಕೇರಳದ ದೈವನ್ ನೃತ್ಯ ಮೇಳ, ಎಂದಿನ ಸಂಪ್ರದಾಯದಂತೆ ಚಪ್ಪರದಲ್ಲಿ ನಂದಿಕೋಲು, ಕೀಲುಕುದುರೆ, ಕೋಲಾಟ, ಸಾಮೇಳ ವಾದ್ಯಗಳು, ಚವರಿ ಸೇವೆ, ದೀವಟಿಗೆ, ಆಕರ್ಷಕವಾಗಿರುತ್ತದೆ.

ಶ್ರೀ ಬಕ್ಕೇಶ್ವರರ ಗದ್ದುಗೆಯ ಹೂವಿನ ಅಲಂಕಾರ ಸೇವೆಯನ್ನು ಎ.ಎಸ್.ಸಲೋಚನಮ್ಮ ಮತ್ತು ಮಕ್ಕಳು ಮಾಡಿದರೆ, ನೂತನ ತೇರಿನ ಹೂವಿನ ಅಲಂಕಾರ ಸೇವಾಕರ್ತರು ಗೌಡರ ಜಯದೇವಪ್ಪ ರೆಡಿಮೇಡ್ ಗಾರ್ಮೆಂಟ್ಸ್ ಮಾಲೀಕರಾದ ಶ್ರೀಮತಿ ಕವಿತಾ ಗೌಡರ್ ಹಾಗೂ ತೇರಿನ ಒಳಹೊರ ಎಲ್.ಇ.ಡಿ ವಿದ್ಯುತ್ ದೀಪದ ವ್ಯವಸ್ಥೆಯನ್ನು ದಿ. ಶಾಮನೂರು ಬಸವರಾಜಪ್ಪನವರ ಮೊಮ್ಮಗ, ಡಾ.ಎಸ್.ಬಿ.ಮುರುಗೇಶ್ ಅವರ ಮಗ ವಾಸ್ತುಶಿಲ್ಪ ತಜ್ಞ ಆಕರ್ಷ್ ಮಾಡಿದ್ದಾರೆ.

**- ಹೆಚ್.ಬಿ.ಮಂಜುನಾಥ್**

# ಮತದಾನಕ್ಕಾಗಿ 107ಕಿ.ಮೀ. ದುರ್ಗಮ ಪ್ರಯಾಣ

ಗಡ್ಚಿರೋಲಿ, ಏ. 12 - ಮಹಾರಾಷ್ಟ್ರದ ಗಡ್ಚಿರೋಲಿ ಜಿಲ್ಲೆಯ ಚುನಾವಣಾ ಸಿಬ್ಬಂದಿ ಕಠಿಣವಾದ 107 ಕಿ.ಮೀ. ಅರಣ್ಯ ಮಾರ್ಗದಲ್ಲಿ ಸಾಗಿ ಮತದಾನಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಅದೂ ಕೇವಲ ಇಬ್ಬರು ಹಿರಿಯರಿಗಾಗಿ!

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗಡ್ಚಿರೋಲಿ - ಚಿಮೂರ್ ಕ್ಷೇತ್ರದ 100 ಹಾಗೂ 86 ವಯಸ್ಸಿನ ಇಬ್ಬರು ಮತದಾರರಿಗಾಗಿ ಈ ವ್ಯವಸ್ಥೆ ಮಾಡಲಾಗುತ್ತಿದೆ. ಈ ಕ್ಷೇತ್ರಕ್ಕೆ ಏಪ್ರಿಲ್ 19ರಂದು ಮತದಾನ ನಡೆಯಲಿದೆ.

85 ವರ್ಷ ಮೀರಿದವರು ಹಾಗೂ ಶೇ.40ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವವರು ಮನೆಯಿಂದಲೇ ಮತದಾನ ಮಾಡಲು ಅವಕಾಶವಿದೆ. ಇಬ್ಬರು ಹಿರಿಯರು ಈ ಆಯ್ಕೆಗೆ ನಿರ್ಧರಿಸಿದ್ದಾರೆ.

ಚುನಾವಣಾ ಅಧಿಕಾರಿಗಳು ಅಹೇರಿಯಿಂದ ಸಿರೊಂಚಾಗೆ 107 ಕಿ.ಮೀ. ದೂರ ಸಾಗಿ 100 ವರ್ಷದ ಕಿಶ್ತಯ್ಯ ಮದರ್ಬೊನಾ ಹಾಗೂ 86 ವರ್ಷದ ಕಿಶ್ತಯ್ಯ ಕೊಮೆರಾ ಅವರಿಂದ ಮತ ಪಡೆಯಲಿದ್ದಾರೆ. ಅವರು ಈ ಇಳಿ ವಯಸ್ಸಿನಲ್ಲೂ ಮತದಾನ ಮಾಡಲು ಉತ್ಸುಕರಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗಡ್ಚಿರೊಲಿ - ಚಿಮುರ್ ಕ್ಷೇತ್ರದ 85 ವರ್ಷ ಮೀರಿದ 1,037 ಹಾಗೂ 338 ದಿವ್ಯಾಂಗರು ಮನೆಯಿಂದಲೇ ಮತದಾನ ಮಾಡಲು ಆಯ್ಕೆ ಪಡೆದುಕೊಂಡಿದ್ದಾರೆ. ಇದುವರೆಗೂ 1,205 ಜನ ಮನೆಯಿಂದಲೇ ಮತದಾನ ಮಾಡಿದ್ದಾರೆ.

## ಚಿಲ್ಲರೆ ಹಣದುಬ್ಬರ ಇಳಿಕೆ


ನವದೆಹಲಿ, ಏ. 12 – ಚಿಲ್ಲರೆ ಹಣದುಬ್ಬರ ದರ ಐದು ತಿಂಗಳಲ್ಲೇ ಅತಿ ಕಡಿಮೆ ಶೇ.4.85ಕ್ಕೆ ಇಳಿಕೆಯಾಗಿದೆ. ಆಹಾರ ವಸ್ತುಗಳ ಬೆಲೆ ಈ ಇಳಿಕೆಗೆ ಪ್ರಮುಖ ಕಾರಣವಾಗಿದೆ. ಹಣದುಬ್ಬರವು ರಿಸರ್ವ್ ಬ್ಯಾಂಕ್‌ನ ಅಪೇಕ್ಷಿತ ಮಟ್ಟವಾದ ಶೇ.4ರ ಹತ್ತಿರಕ್ಕೆ ಬಂದಿದೆ. ಫೆಬ್ರವರಿ ತಿಂಗಳಲ್ಲಿ ಗ್ರಾಹಕರ ಬೆಲೆ ಸೂಚ್ಯಂಕವು ಶೇ.5.09ರಷ್ಟಿತ್ತು. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಶೇ.5.66ರಷ್ಟಿತ್ತು.

# ಹರಿಹರ : ಇಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ




ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಹರಿಹರ ತಾಲ್ಲೂಕಿನಲ್ಲಿ ಪ್ರಚಾರ ಆರಂಭಿಸಲಿದ್ದಾರೆ. ಬೆಳಿಗ್ಗೆ 9ಕ್ಕೆ ಕೊಂಡಜ್ಜಿ, ನಂತರ ಬುಳ್ಳಾಪುರ, ಕೆಂಚನಹಳ್ಳಿ, ಹೊಟ್ಟಿಗೇನಹಳ್ಳಿ, ಕುರುಬರಹಳ್ಳಿ, ಕರ್ಲಹಳ್ಳಿ, ಸಾರಥಿ, ಚಿಕ್ಕಬಿದರಿ, ಪಾಮೇನಹಳ್ಳಿ, ದೀಟೂರು, ಗಂಗನರಸಿ, ಹನಗವಾಡಿ, ಹರಗನಹಳ್ಳಿ, ನಾಗೇನಹಳ್ಳಿ, ಹಲಸಬಾಳು, ರಾಜನಹಳ್ಳಿ, ತಿಮ್ಲಾಪುರ, ಬಿಳಸನೂರು, ನಂದಿಗಾವಿ, ಧೂಳೆಹೊಳೆ, ಇಂಗಳಗೊಂದಿ, ಹುಲಿಗಿನಹೊಳೆ, ಎಳೆಹೊಳೆ, ಮಳಲಹಳ್ಳಿ, ನಂದಿಗುಡಿ, ಉಕ್ಕಡಗಾತ್ರಿ, ವಾಸನ, ಪಾಳ್ಯ, ಕೆ.ಎನ್.ಹಳ್ಳಿ, ಸಿರಿಗೆರೆ, ಕಮಲಾಪುರ, ಭಾನುವಳ್ಳಿ, ಎಕ್ಕೆಗೊಂದಿ ಗ್ರಾಮಗಳಲ್ಲಿ ಮಾಜಿ ಶಾಸಕ ಎಸ್.ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಬಿ.ಎಂ.ವಾಗೀಶ್ ಸ್ವಾಮಿ ಸೇರಿದಂತೆ ಇನ್ನೂ ಅನೇಕ ಮುಖಂಡರ ನೇತೃತ್ವದಲ್ಲಿ ಕಾಂಗ್ರೆಸ್ ಪರ ಪ್ರಚಾರ ನಡೆಸಲಾಗುವುದೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ.ಹನುಮಂತಪ್ಪ, ಎಂ.ಬಿ.ಅಬೀದ್ ಅಲಿ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ತಿಳಿಸಿದ್ದಾರೆ.

# ಕೊಮಾರನಹಳ್ಳಿಯಲ್ಲಿ ಇಂದು ಭರತನಾಟ್ಯ ಕಾರ್ಯಕ್ರಮ



ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಸಭಾಭವನ ಮತ್ತು ಆಶ್ರಮದಲ್ಲಿ ಲೋಕ ಕಲ್ಯಾಣಾರ್ಥವಾಗಿ ಶ್ರೀಕಾಂತಾನಂದ ಭಗವಾನ್ ಸರಸ್ವತೀ ಮಹಾರಾಜರ ನೇತೃತ್ವದಲ್ಲಿ ಅತ್ಯಧಿಕ ಕೋಟಿ ರುದ್ರಯಾಗ ಸಮಿತಿಯಿಂದ ಶುಕ್ರವಾರದಿಂದ ಆರಂಭಗೊಂಡಿರುವ ರುದ್ರ ಪಾರಾಯಣ ಕಾರ್ಯಕ್ರಮದಲ್ಲಿ ಇಂದು ಸಂಜೆ 7 ಗಂಟೆಗೆ ಚಿತ್ರನಟ ಶ್ರೀಧರ್ ಅವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.








KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas